BUDGET ESTIMATES FOR 1965-66—DEMANDS FOR GRANTS
[DEMAND No. 18-MEDICAL—(*contd.*)]

Mr. SPEAKER.—Now Sri Sanjeevanath Aikala will speak.

ಶ್ರೀ ಸಂಜೀವನಾಥ ಐಕಳ.—ಮಾನ್ಯ ಸಭಾಧ್ಯಕ್ಷರೇ, ಕಳೆದ ವರ್ಷ ನಾನು ಮಾತನಾಡುತ್ತಾ ಈ ಆರೋಗ್ಯ ಇಲಾಖೆ ಅನಾರೋಗ್ಯದಿಂದ ತುಂಬಿಕೊಂಡಿದೆ ಅಂತ ಹೇಳಿದ್ದೇನೆ. ಆ ವರ್ಷ ಅದನ್ನು ಇನ್ನೂ ಬಲವತ್ತರವಾಗಿ ಹೇಳಬೇಕಾಗುತ್ತದೆ. ನಾನು ಹೇಳಿದ ಮಾತನ್ನೇ ಸಮರ್ಥಿಸಿ ಮಾನ್ಯ ಆರೋಗ್ಯ ಮಂತ್ರಿಗಳು ಕೆಲವು ದಿವಸಗಳ ಹಿಂದೆ, ಆರೋಗ್ಯ ಇಲಾಖೆಯಲ್ಲಿ ತುಂಬಿಕೊಂಡಂಥ ಅವ್ಯವಹಾರದ ವಿಷಯವಾಗಿ ಅವರೇ ಹೇಳಿದ್ದಾರೆ. ಅಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಮೇಲಿನ ಅಧಿಕಾರಿಗಳಿಂದ ಕೊಡುವಂಥ ಆದೇಶ (ಆರ್ಡರು) ಮುಂತಾದುವುಗಳನ್ನು ಕೆಳಗಿರುವಂಥವರು ಪರಿಪಾಲಿಸದೆ ಇರತಕ್ಕಂಥಾದ್ದು, ಮತ್ತು ಯಾವ ಕಾನೂನು ಅಥವ ರೂಲ್ಸುಗಳು, ಆರ್ಡರುಗಳು, ಇವುಗಳನ್ನು ಸರಿಯಾಗಿ ಇಂಟರ್‌ಪ್ರಿಟ್ ಮಾಡದೆ ಕೆಲಸಗಳನ್ನು ಹಿಂದಕ್ಕೆ ಹಾಕುತ್ತಾ ಇರುವುದು, ಇಂಥವುಗಳನ್ನು ಬಹಳ ಬಿಚ್ಚು ಮನಸ್ಸಿನಿಂದ ಹೇಳಿದ್ದಾರೆ. ನಾವು ಮೂರು ವರ್ಷಗಳಿಂದ ಹೇಳುತ್ತಾ ಬಂದುದನ್ನು ಅಲ್ಲಗಳೆದವರು, ಈ ಸಲ ಅವರೇ ಒಪ್ಪಿ ವೈದ್ಯ ಇಲಾಖೆ ಇಂಥ ಅವ್ಯವಹಾರಗಳಿಂದ ಕೂಡಿದೆ ಎಂದು ಹೇಳಿ ಅವರೇ ಬಿಚ್ಚು ಮನಸ್ಸಿನಿಂದ ಸ್ಪಷ್ಟಪಡಿಸಿದ್ದಾರೆ. ಇದರಿಂದ, ಇನ್ನು ಮುಂದಕ್ಕಾದರೂ ಈ ಆರೋಗ್ಯ ಇಲಾಖೆಯಲ್ಲಿ ಈ ರೀತಿ ಕಂಡುಬರುತ್ತಿರುವ ಕುಂದು ಕೊರತೆಗಳು ನಿವಾರಣೆಯಾಗಬಹುದೆಂದು ನಾನು ಭಾವಿಸುತ್ತೇನೆ.

ನಮ್ಮ ಆಸ್ಪತ್ರೆಗಳಲ್ಲಿರತಕ್ಕಂಥ ಅವ್ಯವಹಾರಗಳು ಜಾಸ್ತಿಯಾಗುತ್ತಾ ಹೋಗಿ, ಡಾಕ್ಟರುಗಳ ಸಂಖ್ಯೆ ಕಡಿಮೆ ಇರುವುದರಿಂದ ಉಂಟಾಗುವ ತೊಂದರೆಗಳು ಬೇಕಾದಷ್ಟು ಹಣ ಇಲ್ಲದಿರುವುದು ಎಷ್ಟೋ ಇವೆ. ಡಾಕ್ಟರರ ಅಭಾವ ಮುಂತಾದುವುಗಳ ಬಗ್ಗೆ ಮಾನ್ಯ ಸದಸ್ಯರುಗಳು ವಿಪುಲವಾಗಿ ಮಾತನಾಡಿದ್ದಾರೆ. ಅದನ್ನೇ ನಾನೂ ಪುನಃ ಪುನಃ ಹೇಳಿದರೆ ಚರ್ವಿತಚರ್ವಣ ಎಂಬ ಗಾದೆಯಂತೆ ಆಗುತ್ತದೆ. ಆ ವಿಷಯಗಳನ್ನು ಹೇಳದೆ ಕೆಲವು ಬೇರೆ ವಿಷಯಗಳ ಮೇಲೆ ಮಾತನಾಡಲು ಬಯಸುತ್ತೇನೆ.

ನಾನು ಹೇಳಬೇಕೆಂದಿರುವ ಒಂದು ವಿಷಯವೆಂದರೆ, ಆರೋಗ್ಯ ಇಲಾಖೆಯಲ್ಲಿ 50-60 ಜನ ಕಂಡೆನ್ಸ್ಡ ಎಂ.ಬಿ.ಬಿ.ಎಸ್. ಕೋರ್ಸ್ ಮಾಡಿರುವಂಥ ಡಾಕ್ಟರುಗಳಿದ್ದಾರೆ. ಹೆಚ್ಚು ಕಡಿಮೆ 50-60 ಜನರಿರುವ ಈ ಡಾಕ್ಟರುಗಳ ವಿಷಯವಾಗಿ ಹೇಳಬೇಕಾಗಿದೆ. ಇವರು ಮೊದಲು ಎಲ್.ಎಂ.ಪಿ. ಇದ್ದು ಗವರ್ನ್‌ಮೆಂಟ್ ಸರ್ವೀಸಿನಲ್ಲಿದ್ದರು. ನಂತರ ಗವರ್ನ್‌ಮೆಂಟಿನಿಂದ ಕಂಡೆನ್ಸ್ಡ ಎಂ.ಬಿ.ಬಿ.ಎಸ್. ಕೋರ್ಸಿಗೆ ಅವರು ಆರಿಸಲ್ಪಟ್ಟು, ಪುನಃ ವಾಪಸ್ಸು ಗವರ್ನ್‌ಮೆಂಟ್ ಸರ್ವಿಸಿಗೇ ಅವರನ್ನು ತೆಗೆದುಕೊಂಡಿರುತ್ತಾರೆ. ಅವರು ಸುಮಾರು 1961-62ನೆಯ ಇಸವಿಯಿಂದ ಗವರ್ನ್‌ಮೆಂಟ್ ಸರ್ವೀಸಿನಲ್ಲಿದ್ದರೂ, ಇವರು ಎಂ.ಬಿ.ಬಿ.ಎಸ್. ಪಾಸ್ ಆದಮೇಲೂ ಮೂರನೆ ದರ್ಜೆಗೇ, ಅಂದರೆ ಅಸಿಸ್ಟೆಂಟ್ ಸರ್ಜನರ ಗ್ರೇಡಿಗೇ ನೇಮಿಸಿರುವಂಥಾದ್ದು ಬಹಳ ದುರದೃಷ್ಟಕರ ಸಂಗತಿ. ಅವರು ಮೊದಲು ಎಲ್.ಎಂ.ಪಿ. ಆಗಿ ಎಲ್.ಎಂ.ಪಿ. ಸರ್ವೀಸು ಮಾಡಿರುತ್ತಾರೆ. ಅವರಲ್ಲಿ ಕೆಲವರು ಸ್ವಂತ ಖರ್ಚಿನಿಂದ, ಮತ್ತೆ ಕೆಲವರು ಗವರ್ನ್‌ಮೆಂಟ್ ಸಹಾಯದಿಂದ, ಕಂಡೆನ್ಸ್ಡ ಎಂ.ಬಿ.ಬಿ.ಎಸ್. ಕೋರ್ಸ್ ಮಾಡಿರಬಹುದು. ಇವೊತ್ತು ಎಂ.ಬಿ.ಬಿ.ಎಸ್. ಪಾಸು ಮಾಡಿಕೊಂಡು ಬಂದಿರುವವರನ್ನು ಮೂರು ವರ್ಷಗಳ ಸರ್ವಿಸ್ಸು ಮಾಡಿದ ನಂತರವೂ ಇವರು ಎಂ.ಬಿ.ಬಿ.ಎಸ್. ಹೊಸದಾಗಿ ಪಾಸ್ ಮಾಡಿಕೊಂಡಿರುವವರಂತೆ ಕೆಲಸ ಮಾಡುವುದನ್ನು ನೋಡಿದರೆ ತುಂಬಾ ವಿಷಾದವಾಗುತ್ತದೆ. ಹೊಸದಾಗಿ ಎಂ.ಬಿ.ಬಿ.ಎಸ್. ಪಾಸು ಮಾಡಿದವರನ್ನು ಸರ್ಕಾರದಲ್ಲಿ 2ನೇ ಗ್ರೇಡಿಗೆ ತೆಗೆದುಕೊಳ್ಳುವಾಗ ಅವರಿಗೆ ಹೆಚ್ಚಿನ ಸಂಬಳ ಕೊಡಲು ಅನುಕೂಲಿಸುವಂತೆ ಅದಕ್ಕಾಗಿ ಹೆಚ್ಚಿನ ಗ್ರಾಂಟುಗಳನ್ನು ಕೊಟ್ಟಿದ್ದರೂ ಆ ಗ್ರೇಡುಗಳನ್ನು ಕೊಡದೇ ಇರುವುದು ತುಂಬಾ ವಿಷಾದದ ಸಂಗತಿ. ಆದುದರಿಂದ ನಮ್ಮ ಆರೋಗ್ಯ ಮಂತ್ರಿಗಳು ಇದರಲ್ಲಿರುವ ಲೋಪದೋಷಗಳನ್ನು ಸರಿಪಡಿಸಬೇಕೆಂದು ಕಳಕಳಿಯಿಂದ ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಸ್ವಾಮಿ, ಸಂತಾನ ನಿರೋಧಕ ಕಾರ್ಯ ಎಂದರೆ ಫ್ಯಾಮಿಲಿ ಪ್ಲಾನಿಂಗ್. ಆ ಬಗ್ಗೆ ನಾನು ಕಳೆದ ವರ್ಷ ಬಹಳ ವಿಪುಲವಾದ ಟೀಕೆಯನ್ನು ಮಾಡಿದೆ. ನಮ್ಮ ಸಮಾಜದಲ್ಲಿ ಇದರಿಂದ ಯಾವ ರೀತಿಯಾಗಿ ಒಂದು ಅನೈತಿಕ ಮಟ್ಟ ಹೆಚ್ಚುತ್ತದೆ ಎಂದು ಆಗ ಹೇಳಿದ್ದೆ. ಆದರೆ ಸರ್ಕಾರ ಇದಕ್ಕಾಗಿ ಯಾವ ಒಂದು ಯೋಜನೆ ಮಾಡಿದ್ದಾರೆ ಅದನ್ನು ಸಮರ್ಥಿಸುತ್ತೇನೆ. ಆದರೆ ಸರ್ಕಾರದವರು ಕೈಗೊಂಡ ಕಾರ್ಯಕ್ರಮ ಹಾಗೂ ಅದು ಪ್ರಾಕ್ಟಿಕಲ್ ಆಗಿ ನಡೆಯುತ್ತಿರುವ ಇವೊತ್ತಿನ ಒಂದು ನೀತಿ ಮತ್ತು ಅವ್ಯವಸ್ಥೆಯಿಂದಾಗಿ ಇದನ್ನು ವಿರೋಧಿಸಬೇಕಾಗಿದೆ. ಇದೇ ರೀತಿ ಹೋದರೆ ನಮ್ಮ ಸಮಾಜವನ್ನು ಅಧಃಪತನದ ಕಡೆಗೆ ಕೊಂಡೊಯ್ಯುತ್ತದೆ ಮತ್ತು, ಇದನ್ನು ನೋಡಿದರೆ ಒಂದು

(ಶ್ರೀ ಸಂಜೀವನಾಥ ಐಕಳ)

ತರಹ ಹೆದರಿಕೆಯೂ ಆಗುತ್ತದೆ. ಇದರ ಪ್ರಚಾರಕ್ಕಾಗಿ ಹಳ್ಳಿ ಹಳ್ಳಿಗಳಲ್ಲಿಯೂ ಮನೆಮನೆಗಳಲ್ಲಿ ಮದುವೆಯಾಗದೇ ಇರುವಂತಹ ಹುಡುಗಿಯರನ್ನು ಸಂತಾನ ನಿರೋಧಕ ಮಾತ್ರೆಯನ್ನು ಉಪಯೋಗಿಸುತ್ತೀರಾ ಎಂದು ಕೇಳುತ್ತಾರೆ. ಈ ರೀತಿಯ ಪ್ರಚಾರವಾದರೆ ನಿಜವಾಗಿಯೂ ಪ್ರಕೃತ ವಾತಾವರಣದಲ್ಲಿ ಎಂತಹ ದುಷ್ಪರಿಣಾಮಗಳು ಜನರಲ್ಲಿ ಉಂಟಾಗುತ್ತವೆ ಎನ್ನುವುದನ್ನು ಯಾರೂ ಗಮನಕ್ಕೆ ತೆಗೆದುಕೊಂಡ ಹಾಗೆ ಕಾಣುತ್ತಿಲ್ಲ. ಅನೇಕ ಕಡೆಗಳಲ್ಲಿ ಮದುವೆಯಾಗದ ಹೆಣ್ಣುಮಕ್ಕಳಿಗೆ, ಮನೆಗಳಲ್ಲಿರುವ ಹಳ್ಳಿಯ ಹೆಂಗಸರಿಗೆ ಇಂತಹ ಮಾತ್ರೆಗಳನ್ನು ಉಪಯೋಗಿಸಿ ಎಂದು ಹೇಳಿದರೆ ಇದರಿಂದ ನೈತಿಕ ಅಧಃಪತನವಾಗುತ್ತದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ನಮ್ಮ ಸಮಾಜದ ನೈತಿಕ ಮಟ್ಟ ಇನ್ನೂ ಅಧಃಪತನಕ್ಕೆ ಇಳಿದು ದೊಡ್ಡಗಂಡಾಂತರ ಪರಿಸ್ಥಿತಿಗೆ ಕೊಂಡುಹೋಗುತ್ತದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ನಮ್ಮ ಹಿಂದೂ ಶಾಸ್ತ್ರದಲ್ಲಿ ಗರ್ಭಪಾತ ಒಂದು ಮಹಾ ದೊಡ್ಡ ಪಾತಕ ಎಂದು ಹೇಳಿದ್ದಾರೆ.

Sri A. P. APPANNA (Virajpet).—Are you opposing Family Planning itself?

Sri SANJEEVANATH AIKALA.—It is not going in the right direction. It is not that I am opposing.

Sri A. P. APPANNA.—Are you giving any suggestion?

Sri SANJEEVANATH AIKALA.—I have suggested. I am going to suggest if the Hon'ble Speaker is going to give ample time. ಗರ್ಭಪಾತದ ಕಾರ್ಯಕ್ರಮ ಎನ್ನುವುದನ್ನೂ ಕೇಂದ್ರ ಸರ್ಕಾರದವರು ಆಲೋಚಿಸಿ ಈಗ ಪ್ರಾಂತ ಸರ್ಕಾರಗಳಿಗೆ ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ನಾನಾದರೂ ಇಲ್ಲಿ ಹೇಳಬಯಸುವುದು ಈ ತರಹದ ಗರ್ಭಪಾತವನ್ನು ಮಾಡಬೇಕೆಂಬ ಯೋಜನೆಯನ್ನು ಬಿಟ್ಟು ಬಿಡಬೇಕು ಎಂದು. ಇದು ಸಮಾಜವನ್ನು ಅನೈತಿಕ ಮಟ್ಟಕ್ಕೆ ಕೊಂಡೊಯ್ಯುವುದರಲ್ಲಿ ಸಂಶಯವಿಲ್ಲ. ಮೇಲಾಗಿ ಇದಕ್ಕೆ ಒಂದು ಕಾನೂನು ಮಾಡುವುದು ನಮ್ಮ ಒಂದು ಅಶಕ್ತಿಯನ್ನು ತೋರಿಸುತ್ತದೆ. ಈ ವಿಷಯದ ಬಗ್ಗೆ ಇನ್ನು ಹೆಚ್ಚಾಗಿ ಹೇಳದೆ ನಾನು ಸರ್ಕಾರಕ್ಕೆ ಸೂಚಿಸುವುದು ಕೇಂದ್ರ ಸರ್ಕಾರದ ಸೂಚನೆಯನ್ನು ತಿರಸ್ಕರಿಸಬೇಕು ಎಂದು ಹೇಳುತ್ತೇನೆ.

ನಮ್ಮ ಆಯುರ್ವೇದದ ಬಗ್ಗೆ ತೋರಿಸಿರುವ ಒಂದು ರೀತಿಯಾದ ಅನಾದರ, ಅನಾಸಕ್ತಿ ಹಾಗೂ ಅಶ್ರದ್ಧೆ, ಇವುಗಳನ್ನು ನೋಡಿದರೆ ತುಂಬಾ ವಿಷಾದವಾಗುತ್ತದೆ. ಇದರ ಬಗ್ಗೆ ಸುಮಾರು ಮೂರು ವರ್ಷಗಳಿಂದಲೂ ತುಂಬಾ ಮಾತನಾಡಿದ್ದೇನೆ. ಇದರಲ್ಲಿ ಒಂದು ತರಹದ ಮೊಸಳೆಯ ಕಣ್ಣೀರು ಸುರಿಸುತ್ತಾರೆಂದು ಹೇಳಿದರೆ ಅದು ತಪ್ಪಾಗಲಾರದು. ಆಯುರ್ವೇದ ವೈದ್ಯ ಪದ್ಧತಿ ಒಂದು ಶಾಸ್ತ್ರೀಯವಾದ ಪದ್ಧತಿ. ಇಂತಹ ವೈದ್ಯಶಾಸ್ತ್ರಕ್ಕಾಗಿ ಹೆಚ್ಚು ಪ್ರೋತ್ಸಾಹ ಕೊಡಬೇಕಾದುದು ಅಗತ್ಯ. ಆದರೆ ಆಯುರ್ವೇದದ ಬಗ್ಗೆ ಏನೊಂದು ಆಸಕ್ತಿ ತೋರಿಸಬೇಕಾಗಿತ್ತೋ ಅದನ್ನು ತೋರಿಸುತ್ತಿಲ್ಲ. ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದಿತ್ತೋ ಅದನ್ನೂ ಅವರು ಮಾಡಿಲ್ಲ. ನಮಗೆಲ್ಲಾ ತಿಳಿದಿರುವಂತೆ ಒಂದು ಸರ್ಕಾರದ ಆಯುರ್ವೇದದ ಕಾಲೇಜು ಇದೆ ಮತ್ತು ಕೆಲವು ಸುಮಾರು 11-12 ಪ್ರೈವೇಟ್ ಕಾಲೇಜುಗಳನ್ನು ಬೇರೆಯವರು ನಡೆಸುತ್ತಿದ್ದಾರೆ. ಅವುಗಳ ಬಗ್ಗೆ ಸರ್ಕಾರದ ಅನಾದರ ಬಹಳವಾಗಿದೆ. ಮೈಸೂರು ಆಯುರ್ವೇದದ ಕಾಲೇಜನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಸಬೇಕು. ಅದಕ್ಕೆ ಬೇಕಾದ ಅನುಕೂಲತೆಗಳನ್ನು ಒದಗಿಸಿ ಕೊಡಬೇಕು, ಡಾಕ್ಟರುಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಮತ್ತು, ಅದಕ್ಕೆ ಬೇಕಾದ ಕಟ್ಟಡಗಳನ್ನು ಬೇರೆ ಸಾಮಗ್ರಿಗಳನ್ನು ಒದಗಿಸಿಕೊಡಬೇಕೆಂದು ಅಲ್ಲಿರುವ ವಿದ್ಯಾರ್ಥಿಗಳು, ಅಧ್ಯಾಪಕರುಗಳು ಮತ್ತು ಅದಕ್ಕೆ ಸಂಬಂಧಪಟ್ಟವರು ಹಾಗೂ ಅನೇಕ ಶಾಸನಸಭೆಯ ಸದಸ್ಯರುಗಳು ಸಹ ಸೂಚನೆಗಳನ್ನು ಕೊಟ್ಟಿದ್ದರೂ ಇನ್ನೂ ಮೈಸೂರಿನಲ್ಲಿರುವ ಆಯುರ್ವೇದದ ಕಾಲೇಜಿನ ಪರಿಸ್ಥಿತಿ ನೋಡಿದರೆ ತೀರಾ ಖಂಡನೀಯವಾಗಿದೆ. ಇದರಿಂದ ಆಯುರ್ವೇದವು ನಿಜವಾಗಿಯೂ ಖಂಡಿತ ಉದ್ಧಾರವಾಗುವುದಿಲ್ಲ. ಇದರಿಂದ ಆಯುರ್ವೇದದ ಕೊಲೆಯಾಗುತ್ತದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಇಂತಹ ಆಸಕ್ತಿ ಇಲ್ಲದ ಶ್ರದ್ಧೆಯಿಲ್ಲದ ಜನಗಳು ಈ ಆಸ್ಪತ್ರೆಯಲ್ಲಿದ್ದಾರೆ. ಇಲ್ಲಿರುವ ವೈದ್ಯರುಗಳು ಜನತೆಯ ಬಗ್ಗೆ ತೀವ್ರವಾದ ಆಸಕ್ತಿಯನ್ನು ವಹಿಸುತ್ತಿರುವಂತೆ ಕಾಣಿಸುತ್ತಿಲ್ಲ. ಅಲ್ಲದೆ ಆಯುರ್ವೇದದ ಬಗ್ಗೆ ಹೆಚ್ಚಿನ ಆಸಕ್ತಿಯುಳ್ಳ ಆಸ್ಪತ್ರೆಗಳನ್ನು ಯೋಗ್ಯರೀತಿಯಲ್ಲಿ ಜನತೆಗೆ ಅನುಕೂಲಗಳನ್ನು ಮಾಡಿಕೊಡುವ ಭಾವನೆ ಇಲ್ಲಿಯ ಮುಖ್ಯಸ್ಥರಲ್ಲಿ ಕಾಣುತ್ತಿಲ್ಲ. ಈ ಬಗ್ಗೆ ಸರಕಾರಕ್ಕೆ ಸಂಬಂಧಪಟ್ಟವರು ಅನೇಕ ವಲಹೆಗಳು ಹಾಗೂ ಸೂಚನೆಗಳನ್ನು ರೆಪ್ರಸೆಂಟೇಷನ್ನುಗಳನ್ನೂ ಕೊಟ್ಟರು ಕೂಡ ಆ ಬಗ್ಗೆ

ಯಾವ ಕೆಲಸವೂ ನಡೆದ ಹಾಗೆ ನನಗೆ ಕಾಣುತ್ತಿಲ್ಲ. ಸರಕಾರದವರು ಅನುಸರಿಸುತ್ತಿರುವ ನೀತಿ ಆಯುರ್ವೇದದ ಬಗ್ಗೆ ಹಾಗೂ ಆಯುರ್ವೇದ ಕಾಲೇಜಿನ ಬಗ್ಗೆ ಸರಿಯಾಗಿಲ್ಲ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗದು. ಇದೇ ರೀತಿಯಾದ ಅಸಕ್ತಿಯನ್ನು ಖಾಸಗಿಯವರು ಬೇರೆಯಾಗಿ ನಡೆಸುತ್ತಿರುವ ಆಯುರ್ವೇದದ ಕಾಲೇಜುಗಳಲ್ಲೂ ತೋರಿಸಲಾಗುತ್ತಿದೆ. ಸುಮಾರು 12-13 ಆಯುರ್ವೇದದ ಸಂಸ್ಥೆಗಳಿಗಾಗಿ ಸಹಾಯರೂಪದಲ್ಲಿ ಕೊಡುತ್ತಿರುವ ಹಣ ಬಹಳ ಕಡಿಮೆಯಾಗುತ್ತಿದೆ. ಆಯುರ್ವೇದದ ಪಂಡಿತರಿಗಾಗಿ ಸರಕಾರ ಸಾಧಾರಣವಾಗಿ ಸುಮಾರು ಒಂದು ಲಕ್ಷದಷ್ಟು ಈಗ ಖರ್ಚು ಮಾಡುತ್ತಿದ್ದರೆ ಇನ್ನು ಮುಂದೆ ಇದಕ್ಕಾಗಿ 40-50 ಸಾವಿರ ರೂಪಾಯಿಗಳಷ್ಟು ಕೊಡಬೇಕೆಂದು ಮಾಡುತ್ತಿದ್ದಾರೆ. ಸರಕಾರದ ಮೂಲಕ ನಡೆಸುತ್ತಿರುವ ಕಾಲೇಜುಗಳಿಗೆ ಹೆಚ್ಚು ಹಣ ಸಹಾಯವನ್ನು ಮಾಡಿ ಇತರ ಸಂಸ್ಥೆಗಳಿಗೆ ಕಡಿಮೆ ಮಾಡಿದರೆ ಇದರಲ್ಲಿ ಒಂದು ರೀತಿಯಾದ ತಾರತಮ್ಯವನ್ನು ತೋರಿಸುತ್ತಿದ್ದಾರೆ ಎಂದು ಹೇಳಬೇಕಾಗಿದೆ. ಈಗ ಶೇಕಡಾ ಐವತ್ತರಷ್ಟು ಗ್ರಾಂಟುಗಳಾಗಿ ಕೊಡುತ್ತಿದ್ದಾರೆ. ಇದರಲ್ಲಿ ಡೆಫಿಷಿಯನ್ಸಿ ಹೆಚ್ಚಾಗಿ ತೋರಿಸಬೇಕೆಂದು ಸರಕಾರದವರು ಹೇಳುತ್ತಾರೆ. ಹಾಗೆ ಮಾಡಬೇಕಾದರೆ ಸುಳ್ಳು ಲೆಕ್ಕಗಳನ್ನು ಬರೆಯಬೇಕಾಗಿ ಬರುತ್ತದೆ. ಸರಿಯಾದ ಲೆಕ್ಕವಿಲ್ಲದೆ ಇದ್ದರೆ ಅವರಿಗೆ ಕೊಡುವ ಗ್ರಾಂಟುಗಳುಕೂಡ ಹೆಚ್ಚು ಕಡಮೆಯಾಗುತ್ತದೆ. ಖಾಸಗಿಯವರು ನಡೆಸುವಂತಹ ಸಂಸ್ಥೆಗಳಿಗೆ ಈ ರೀತಿ ಮಾಡುವುದು ಬಹಳ ಅನ್ಯಾಯವಾಗುತ್ತದೆ. ಇದನ್ನು ಸರಕಾರದವರು ಸರಿ ಪಡಿಸಬೇಕು. ಸರಕಾರದ ಸಹಾಯಗಳು ಕಡಿಮೆಯಾದರೆ ಖಾಸಗಿ ಸಂಸ್ಥೆಗಳು ಅವನ್ನು ಸರಿಯಾಗಿ ಮುಂದುವರಿಸದೇ ಇರುವಂತಹ ಸ್ಥಿತಿ ಬಂದಿದೆ. ಆಯುರ್ವೇದದ ಬಗ್ಗೆ ಸರಕಾರ ಇನ್ನೂ ಹೆಚ್ಚು ಹಣ ಸಹಾಯವನ್ನು ಕೊಡಬೇಕೆಂದು ಹೇಳುತ್ತೇನೆ ಮತ್ತು ಹಾಗೆ ಹಣಸಹಾಯ ವಿಲ್ಲದೇ ಹೋದರೆ ಖಂಡಿತವಾಗಿ ಇದು ಮುಂದಕ್ಕೆ ಹೋಗಲಾರದು. ನಾನು ಹೇಳುವುದನ್ನು ಮಾನ್ಯ ಸದಸ್ಯರು ತಪ್ಪು ತಿಳಿಯಲಿಕ್ಕಿಲ್ಲ ಎಂದು ಭಾವಿಸುತ್ತೇನೆ. ಬಹುಶಃ ನಮ್ಮ ದೇಶದಲ್ಲಿ ಹೆಚ್ಚು ಜನ ಖಾಸಗಿ ವೈದ್ಯರುಗಳಲ್ಲಿ ಹಾಗೂ ಅನುವಂಶೀಕವಾಗಿ ಬಂದ ವೈದ್ಯರುಗಳಲ್ಲೇ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಹೆಚ್ಚು ಜನರು ಪಾಶ್ಚಾತ್ಯ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ ಎಂದು ಸರಕಾರದವರು ಕೊಡುವ ಸಂಖ್ಯೆಗಳಿಂದ ಹೇಳಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಲ್ಪ ಹಳೆಯ ವೈದ್ಯರುಗಳಿಂದಲೂ, ಅನುವಂಶಿಕವಾಗಿ ಬಂದಿರುವ ಆಯುರ್ವೇದ ವೈದ್ಯರುಗಳಿಂದಲೂ ಇನ್ನೂ ಚಿಕಿತ್ಸೆಗಳನ್ನು ಪಡೆಯುತ್ತಿದ್ದಾರೆ. ಪಾಶ್ಚಾತ್ಯ ವೈದ್ಯ ಪದ್ಧತಿಯಲ್ಲಿ ಚಿಕಿತ್ಸೆ ಪಡೆಯುವವರಿಗಿಂತ ಆಯುರ್ವೇದ ವೈದ್ಯ ಪಂಡಿತರುಗಳಿಂದಲೇ ಹೆಚ್ಚಾಗಿ ಜನ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಕೇವಲ ಒಂದು ಲಕ್ಷದಷ್ಟು ಇದಕ್ಕಾಗಿ ವರ್ಷಕ್ಕೆ ಖರ್ಚು ಮಾಡಿದರೆ ಅದರಿಂದ ಇದು ಹೆಚ್ಚು ಅಭಿವೃದ್ಧಿ ಸಾಧಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು. ಆಯುರ್ವೇದದ ಪದ್ಧತಿಯಲ್ಲೂ ಬೇರೆ ಬೇರೆ ಸ್ಕೀಮುಗಳಿವೆ, ರೀಸರ್ಚ್ ಮಾಡಬೇಕಾದ ಅಗತ್ಯವಿದೆ. ಇದಕ್ಕಾಗಿ ಈ ವರ್ಷ ಹಣವನ್ನು ಒದಗಿಸಿದ್ದರೂ ಕೂಡ ಅದು ಲ್ಯಾಪ್ಸ್ ಆಗಿದೆ. ನನಗೆ ತಿಳಿದ ಮಟ್ಟಿಗೆ ಸೆಂಟ್ರಲ್ ಗವರ್ನಮೆಂಟಿನಿಂದ ನಮ್ಮ ಪ್ರಾಂತ ಸರಕಾರಕ್ಕೆ ಮೂರನೆ ಯೋಜನೆಯಲ್ಲಿ ಆಯುರ್ವೇದದ ಕಾಲೇಜುಗಳ ಕಟ್ಟಡದ ಬಗ್ಗೆ ಹಾಗೂ ರೀಸರ್ಚ್‌ವರ್ಕ್‌ಗಳ ಬಗ್ಗೆ ತುಂಬಾ ಧನಸಹಾಯವನ್ನು ಒದಗಿಸುತ್ತಿದ್ದಾರೆಂದು ಹೇಳಿದ್ದರೂ ಅದರಂತೆ ನಮ್ಮ ಸರಕಾರ ಧನಸಹಾಯ ಮಾಡಿರುವುದು ಕಂಡುಬಂದಿಲ್ಲ. ಆಯುರ್ವೇದದ ಬಗ್ಗೆ ಜನರಲ್ಲಿ ಒಂದು ಸರಿಯಾದ ತಿಳುವಳಿಕೆಯನ್ನು ಕೊಡಲು ಅದಕ್ಕೆ ಬೇಕಾದ ಪ್ಲಾನುಗಳನ್ನಾಗಲೀ, ಪ್ರಾಜೆಕ್ಟುಗಳನ್ನಾಗಲೀ ಉಪಯೋಗಿಸುತ್ತಿರುವುದು ನನಗೆ ತಿಳಿದುಬಂದಿಲ್ಲ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ ಆಯುರ್ವೇದದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಉದಾಸೀನ ಮನೋಭಾವ ತೋರಿಸುತ್ತಾರೆ ಎಂದು ಕಂಡುಬರುತ್ತದೆ. ಆಯುರ್ವೇದದ ಬಗ್ಗೆ ಆಸಕ್ತಿ ಇದ್ದರೆ ಸಹಾಯ ಮಾಡಿ ಇಲ್ಲದಿದ್ದರೆ ಮೇಲು ಉಪಚಾರಕ್ಕೆ ಸಹಾಯ ಮಾಡಿದ ಹಾಗೆ ತೋರಿಸುವುದು ಸರಿಯಲ್ಲ. ಇದರಿಂದ ಆಯುರ್ವೇದ ಉದ್ಧಾರವಾಗುವುದಿಲ್ಲ. ಜನರಲ್ಲಿ ತಪ್ಪು ಭಾವನೆ ಉಂಟುಮಾಡಬೇಡಿ. ಅನುಕೂಲತೆ ಮಾಡಿಕೊಡುವುದಾದರೆ ಆಲ್ ರೌಂಡ್ ಡೆವಲಪ್‌ಮೆಂಟ್‌ಗೆ ಸಹಾಯ ಒದಗಿಸಿರಿ. ಅರ್ಧಂಬರ್ಧ ಮಾಡುವುದು ಬೇಡ. ಸ್ವಲ್ಪ ಸಹಾಯ ಕೊಟ್ಟು ಇತ್ತ ಕಡೆ ಬದುಕಬಾರದು ಅತ್ತ ಕಡೆ ಸಾಯಬಾರದು ಎನ್ನುವ ಹಾಗೆ ಮಾಡುವುದು ಬೇಡ. ಆಯುರ್ವೇದದಲ್ಲಿ ಅಂತಃಶಕ್ತಿ ಇದ್ದರೆ ಅದು ತನ್ನಷ್ಟಕ್ಕೆ ತಾನೇ ಬೆಳೆಯುತ್ತದೆ. ಆಯುರ್ವೇದವು ಮೂರು ನಾಲ್ಕು ಸಾವಿರ ವರ್ಷಗಳಿಂದ ಬೆಳೆದುಕೊಂಡು ಬಂದಿದೆ. ಅದು ಬದುಕುತ್ತದೆ. ಸರಕಾರದ ಯಾವ ಸಹಾಯ ಬೇಕಿಲ್ಲ. ಇದನ್ನು ತಿಳಿದುಕೊಂಡು ಆಯುರ್ವೇದಕ್ಕೆ ಪ್ರೋತ್ಸಾಹಕೊಡಿ. ಇಲ್ಲದಿದ್ದರೆ ನಮಗೆ ಪಾಶ್ಚಾತ್ಯ ಪದ್ಧತಿಯೇ ಬೇಕು ಎಂದು ಹೇಳಿ ಬಿಡುವುದು ಒಳ್ಳೆಯದು. ಅರ್ಧಂಬರ್ಧ ಮಾಡುವುದು ಬೇಡ. ಈ ರೀತಿ ಖರ್ಚು ಮಾಡುವುದು ಒಳ್ಳೆಯದಲ್ಲ. ಬೆಂಗಳೂರಿನಲ್ಲಿ ಜಯಚಾಮರಾಜೇಂದ್ರ ಆಯುರ್ವೇದ ಆಸ್ಪತ್ರೆ ಎಂಬ ಸರಕಾರಿ ಆಸ್ಪತ್ರೆ ಇದೆ. ಅಲ್ಲಿಗೆ ಹೋಗಿ ನೋಡಿದರೆ ಎಲ್ಲ ಗೊತ್ತಾಗುತ್ತದೆ. ಸರಕಾರ ಎಷ್ಟರ ಮಟ್ಟಿಗೆ ಆಸಕ್ತಿ ವಹಿಸಿದೆ ಎಂಬುದು ಗೊತ್ತಾಗುತ್ತದೆ. ಆಯುರ್ವೇದದ ಬಗ್ಗೆ ತೋರಿಸುವ ಅನಾದರಣೆ ನಿವಾರಣೆಯಾಗಬೇಕು ಎಂದು ಹೇಳುತ್ತೇನೆ.

(SRI SANJEEVANATH AIKALA)

ಇನ್ನು ಸೆಂಟ್ರಲ್ ಫಾರ್ಮಸಿ ಬಗ್ಗೆ ಹೇಳುವುದಾದರೆ ಆಸ್ಪತ್ರೆಗಳಿಗೆ ಬೇಕಾಗುವ ಔಷಧಿ ತಯಾರಿಸುವ ಇದೊಂದು ಸಂಸ್ಥೆಯಾಗಿದೆ. ಖಾಸಗಿ ಫಾರ್ಮಸಿಗಳಲ್ಲಿ ದೊರೆಯುವ ಔಷಧಿ ಬೆಲೆಗಿಂತ ಮೂರು ನಾಲ್ಕು ಪಾಲು ಬೆಲೆ ಹೆಚ್ಚು ಈ ಸಂಸ್ಥೆಯಲ್ಲಿ ಇರುತ್ತದೆ. ರಾ ಮೆಟೀರಿಯಲ್ಸ (Raw-Materials) ಪಡೆಯುವ ಕ್ರಮದಲ್ಲಿ ಅವ್ಯವಸ್ಥೆ ಇದೆ. ಇದು ಸರಕಾರಕ್ಕೆ ಗೊತ್ತಾಗಿರಬಹುದು. ಆಯುರ್ವೇದದ ಬಗ್ಗೆ ಏನಾದರೂ ಆಗಲಿ ಅಥವಾ ಹೋಗಲಿ ಎಂಬ ಭಾವನೆ ಇದ್ದ ಹಾಗೆ ಇದೆ. ಆಸ್ಪತ್ರೆಗೆ ಬೇಕಾಗುವ ಹತ್ತಿಪ್ಪತ್ತು ಔಷಧಿ ಗಳಲ್ಲಿ ನಾಲ್ಕೈದು ಔಷಧಿಗಳು ಮಾತ್ರ ಇಲ್ಲಿ ದೊರೆಯುತ್ತವೆ. ದೊರೆಯುವುದನ್ನಷ್ಟೇ ಕಳಿಸುತ್ತಾರೆ. ಬಾಕಿ ಔಷಧಿಗಾಗಿ ಮತ್ತೆ ಬರೆಯಬೇಕಾಗುತ್ತದೆ. ಸೆಂಟ್ರಲ್ ಫಾರ್ಮಸಿಯಿಂದ ಔಷಧಿ ಸರಿಯಾಗಿ ಎಲ್ಲಾ ಆಸ್ಪತ್ರೆಗಳಿಗೆ ಹೋಗುವುದಿಲ್ಲ. ಇದ್ದುದನ್ನು ಸಹ ಸರಿಯಾಗಿ ರವಾನೆ ಮಾಡುವುದಿಲ್ಲ. ಈಗ ಔಷಧಿ ಬೆಲೆ ಜಾಸ್ತಿಯಾಗಿದೆ. 2,000 ರೂಪಾಯಿಗಳಿಗೆ ಸಿಕ್ಕುವ ಔಷಧಿ ಬಹಳ ಕಡಿಮೆ. ಸೆಂಟ್ರಲ್ ಆಯುರ್ವೇದ ಫಾರ್ಮಸಿಯಲ್ಲಿ ಔಷಧಿ ತಯಾರಿಕೆ ಮತ್ತು ಅದರ ಕಾರ್ಯ ನಿರ್ವಹಣೆ ತುಂಬಾ ಅವ್ಯವಹಾರ್ಯವಾಗಿ ನಡೆಯುತ್ತಿದೆಯೆಂದು ಸ್ಪಷ್ಟವಾಗಿ ಹೇಳುತ್ತೇನೆ. ಸರಕಾರ ಇದರ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟನ್ನು ಹೇಳಿ ನನ್ನ ನಾಲ್ಕು ಮಾತು ಮುಗಿಸುತ್ತೇನೆ.

† ಶ್ರೀ ಎ. ಪಿ. ಅಪ್ಪಣ್ಣ.—ಮಾನ್ಯ ಸಭಾಪತಿಗಳೇ, ಸಭೆಯ ಮುಂದೆ ಇರುವ ಬೇಡಿಕೆಯನ್ನು ಸಮರ್ಥಿಸುತ್ತಾ ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಈ ಇಲಾಖೆಯ ಬೇಡಿಕೆಯಿಂದ ನಮ್ಮ ಕೊಡಗಿನವರಿಗೆ ಬಹಳ ವರ್ಷದಿಂದ ಅಸಮಾಧಾನವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಪ್ರತಿ ವರ್ಷ ನಾವು ನೋಡುತ್ತೇವೆ ; ನಮ್ಮ ಕೊಡಗಿನಲ್ಲಿರುವ 10-13 ಆಸ್ಪತ್ರೆಗಳಲ್ಲಿ ಡಾಕ್ಟರ್ ಇಲ್ಲ. ಇದನ್ನು ಇಲಾಖೆಯ ಮುಂದೆ ಮಂತ್ರಿಗಳ ಮುಂದೆ ಈ ಸಭೆಯ ಮುಂದೆ ಇಟ್ಟರೂ ಸಹ ಇಷ್ಟರವರೆಗೆ ಅನೇಕ ಆಸ್ಪತ್ರೆಗಳಲ್ಲಿ ಆರು ವರ್ಷದಿಂದ ಮೂರು ವರ್ಷದ ವರೆಗೆ ಡಾಕ್ಟರ್ ಇಲ್ಲ. ಇಂಥ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಎಲ್ಲ ಸಲಕರಣೆ ಒದಗಿಸಿದ್ದರೂ ಸಹ ಡಾಕ್ಟರ್ ಇಲ್ಲದ ಆಸ್ಪತ್ರೆಯಲ್ಲಿ ಯಾವ ಕೆಲಸ ನಡೆಯುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಮಲೆನಾಡು ಪ್ರದೇಶದಲ್ಲಿ ಆರೇಳು ತಿಂಗಳು ಮಳೆಯ ಹಾವಳಿಯಿಂದ ಜನರಿಗೆ ವೈದ್ಯಕೀಯ ಸಹಾಯ ಆರೋಗ್ಯ ರಕ್ಷಣೆಗೆ ಪರಿಹಾರ ದೊರೆಯುವುದಿಲ್ಲ. ಆರು ವರ್ಷದಿಂದ ಡಾಕ್ಟರ್ ಇಲ್ಲ ಎಂದು ರೋದನ ಮಾಡುತ್ತಾ ಇದ್ದರೂ ಸಹ ಡಾಕ್ಟರ್ ಬರುವುದಿಲ್ಲ. ಬೆಳಿಗ್ಗೆ ಬಂದ ಡಾಕ್ಟರ್ ಅವರು ಸಾಯಂಕಾಲ ಹಿಂದಿರುಗಿ ಬರುತ್ತಾರೆ ಮತ್ತು ಅವರ ಟ್ರಾನ್ಸ್‌ಫರ್ ಆರ್ಡರ್ ಕ್ಯಾನ್ಸಲ್ ಆಗಿರುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಡಬೇಕು. ಇಲ್ಲಿಂದ ಕಳಿಸಿಕೊಟ್ಟಂಥ ಡಾಕ್ಟರರು ಆಸ್ಪತ್ರೆಗೆ ಬಂದು ಮಲೆನಾಡಿನಲ್ಲಿ ಇರಲು ಆಗುವುದಿಲ್ಲ ಎಂದು ಹಿಂದಕ್ಕೆ ಬಂದು ಟ್ರಾನ್ಸ್‌ಫರ್ ಆರ್ಡರ್ ಯಾವ ರೀತಿ ಕ್ಯಾನ್ಸಲ್ ಮಾಡಿಸಿದರು, ಡಿಪಾರ್ಟ್‌ಮೆಂಟಿನಲ್ಲಿ ಹೇಗೆ ಕೆಲಸ ನಡೆಯುತ್ತಿದೆ ಎಂದು ಪ್ರಶ್ನೆ ಹಾಕಬೇಕಾಗುತ್ತದೆ. ಡಾಕ್ಟರರನ್ನು ಪೋಸ್ಟ್ ಮಾಡಿ ಹಿಂದೆ ಬರುವಂತೆ ಮಾಡಲು ಅವಕಾಶವಿದೆ. ಇದನ್ನು ಡಿಪಾರ್ಟ್‌ಮೆಂಟು ಒಪ್ಪುತ್ತದೆ ಹಾಗು ಡಾಕ್ಟರರು ಧೈರ್ಯವಾಗಿ ಇರುತ್ತಾರೆ ಎಂದು ಅರ್ಥವಾಗುತ್ತದೆ. ಟ್ರಾನ್ಸಫರ್ ಆರ್ಡರ್ ಕ್ಯಾನ್ಸಲ್ ಮಾಡುತ್ತಾರೆ ಅಂದರೆ ಆಡಳಿತ ಸರಿಯಾಗಿ ನಡೆಯುತ್ತಿಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳಲು ಇಷ್ಟಪಡುತ್ತೇನೆ. ಅನೇಕ ಸಲ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಯಾರಾದರೂ ಕೊಡಗಿನವರು ಡಾಕ್ಟರ್ ಇದ್ದರೆ ಹೇಳಿ ಅವರನ್ನು ಅಲ್ಲಿಗೆ ಪೋಸ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ಅಂಥ ಡಾಕ್ಟರರ ಹೆಸರು ತಿಳಿಸಿದಾಗ್ಗೆ ಅವರನ್ನು ಕೊಡಗಿಗೆ ಕಳಿಸಿ ಒಂದು ವರ್ಷದಲ್ಲಿ ಅವರ ಟ್ರಾನ್ಸ್‌ಫರ್ ಆರ್ಡರ್ ಕ್ಯಾನ್ಸಲ್ ಮಾಡಿದ್ದಾರೆ. ಈ ರೀತಿ ಆಡಳಿತ ನಡೆಯುತ್ತಿದೆ. ಕೊಡಗಿಗೆ ಡಾಕ್ಟರರು ಬರುತ್ತಿಲ್ಲ, ಕೊಡಗಿನಲ್ಲಿ ಆಸ್ಪತ್ರೆ ನಡೆಸಲು ಸಾಧ್ಯವಿಲ್ಲ ಎಂದು ತಿಳಿದುಕೊಳ್ಳಬೇಕಾಗಿದೆ. ಈಗ ಇರತಕ್ಕ ಆಸ್ಪತ್ರೆಗಳನ್ನು ಸರಿಯಾಗಿ ನಡೆಸದೇ ಇರುವವರೆಗೆ ಹೊಸ ಆಸ್ಪತ್ರೆಗಳನ್ನು ತೆರೆಯುವುದಕ್ಕೆ ಹೋಗಬಾರದು ಎಂದು ನನ್ನ ಸಲಹೆ. ಇರತಕ್ಕಂಥ ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲ ಔಷಧಿ ಇಲ್ಲ. ಇಂಥ ಸಂದರ್ಭದಲ್ಲಿ ಏತಕ್ಕೆ ಹೊಸ ಆಸ್ಪತ್ರೆ ತೆರೆಯಬೇಕು ? ಇರತಕ್ಕಂಥ ಆಸ್ಪತ್ರೆ ಸುವ್ಯವಸ್ಥಿತವಾಗಿ ನಡೆಸಿ ಹತೋಟಿಗೆ ತರದೆ ಹೊಸ ಆಸ್ಪತ್ರೆ ತೆರೆಯಬಹುದೇ ಎಂದು ಕೇಳಬೇಕಾಗಿದೆ. ಈ ದೃಷ್ಟಿಯಿಂದ ಇನ್ನು ಮುಂದೆ ಹೊಸ ಆಸ್ಪತ್ರೆ ತೆರೆಯುವುದರ ಬದಲು ಇರತಕ್ಕಂಥವುಗಳನ್ನು ಸರಿಯಾಗಿ ನಡೆಸಿ, ಡಾಕ್ಟರರನ್ನು ಕೊಟ್ಟು, ಔಷಧಿ ಕೊಟ್ಟು ನಡೆಸುವುದಕ್ಕೆ ಪ್ರಯತ್ನ ಮಾಡಬೇಕೇ ವಿನಾ ಲೆಕ್ಕ ಕೊಡುವುದಕ್ಕಾಗಿ ಸ್ಟ್ಯಾಟಿಸ್ಟಿಕ್ಸ್ ಕೊಡುವುದಕ್ಕಾಗಿ ಇಷ್ಟು ಆಸ್ಪತ್ರೆ ತೆರೆದಿದ್ದೇವೆ ಎಂದು ಹೇಳುವುದಾದರೆ ಇರುವ ಆಡಳಿತ ಹಾಳಾಗಿಹೋಗುತ್ತದೆ. ಮುಂದಕ್ಕೆ ಸಹ ಹಾಳಾಗುತ್ತದೆ ಎಂದು ಹೇಳಲು ಇಷ್ಟಪಡುತ್ತೇನೆ.

2-30 P.M.

ಸ್ವಾಮಿ, ನಾನಿನ್ನು ಔಷಧಿಗಳನ್ನು ಕಳುಹಿಸತಕ್ಕ ವಿಚಾರದಲ್ಲಿ ತಮ್ಮ ಮುಂದೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ಇರತಕ್ಕ ಕ್ರಮದ ಪ್ರಕಾರ ಒಂದೊಂದು ಆಸ್ಪತ್ರೆಗೂ ಇಂತಿಷ್ಟು ಔಷಧಿಗಳನ್ನು ಕಳುಹಿಸಬೇಕು ಎಂಬುದಾಗಿ ಒಂದು ಪಟ್ಟಿಯನ್ನು ಇಟ್ಟು ಕೊಂಡು ಅದರ ಪ್ರಕಾರ ಔಷಧಿಗಳನ್ನು ಪ್ರತಿಯೊಂದು ಆಸ್ಪತ್ರೆಗೂ ಕಳುಹಿಸುತ್ತಿದ್ದಾರೆ. ಕೊಡಗಿ ನಲ್ಲಿರತಕ್ಕ ಒಂದು ಆಸ್ಪತ್ರೆಗೆ ಸುಮಾರು 1500 ರೂಪಾಯಿಗಳ ಬೆಲೆ ಬಾಳತಕ್ಕ ಲೆಪ್ರಸಿ ಔಷಧಿಯನ್ನು ಪ್ರತಿ ವರ್ಷವೂ ಅಲ್ಲಿಗೆ ಕಳುಹಿಸುತ್ತಲೇ ಇದ್ದಾರೆ. ಅಲ್ಲಿರತಕ್ಕ ಆಸ್ಪತ್ರೆಯ ಡಾಕ್ಟರು ಇಲ್ಲಿಗೆ ಈ ಲೆಪ್ರಸಿ ಔಷಧಿಯನ್ನು ಕಳುಹಿಸುವುದು ಬೇಡ ಈ ಔಷಧಿಯನ್ನು ಉಪಯೋಗಿಸತಕ್ಕಂಥ ರೋಗಿಗಳು ಇಲ್ಲಿ ಯಾರೂ ಇಲ್ಲ ಆದುದರಿಂದ ಆ ಔಷಧಿಯನ್ನು ಕಳುಹಿಸಬೇಡಿ ಎಂತ ಅಲ್ಲಿನ ಡಾಕ್ಟರು ತಿಳಿಸಿ ದಾಗ್ಯೂ ಒಂದೇ ಸಮನಾಗಿ ಇಲ್ಲಿಗೆ 5 ವರ್ಷಗಳಿಂದಲೂ ಆ ಲೆಪ್ರಸಿ ಔಷಧಿಯನ್ನು ಅಲ್ಲಿಗೆ ಕಳುಹಿ ಸುತ್ತಲೇ ಇದ್ದಾರೆ. ಇನ್ನು ಇದೇ ರೀತಿಯಲ್ಲಿ ಬೇರೊಂದು ಆಸ್ಪತ್ರೆಗೆ ಟಿ.ಬಿ. ಪೇಷೆಂಟುಗಳಿಲ್ಲವೊ ಅಲ್ಲಿಗೂ ಹೀಗೆ ಅವರು ಬೇಡ ಎಂಬುದಾಗಿ ಬರವಣಿಗೆಯಲ್ಲಿ ಬರೆದು ತಿಳಿಸಿದ್ದಾಗ್ಯೂ ಅಲ್ಲಿ ಅಂಥ ರೋಗಿಗಳಿಲ್ಲವೆಂಬುದಾಗಿ ತಿಳಿಸಿದ್ದರೂ ಕಳೆದ 5 ವರ್ಷಗಳಿಂದ ಅಲ್ಲಿಗೂ ಒಂದೇ ಸಮನಾಗಿ ಆ ಟಿ.ಬಿ. ಔಷಧಿಯನ್ನು ಕಳುಹಿಸುತ್ತಲೇ ಇದ್ದಾರೆ. ಹೀಗೆ ಕೆಲವು ಡಾಕ್ಟರುಗಳು ಯಾವ ಯಾವ ಸ್ಥಳದಲ್ಲಿ ಯಾವ ಯಾವ ಔಷಧಿಗಳು ಬೇಕು ಯಾವ ಯಾವ ಔಷಧಿಗಳು ಬೇಡ ಎಂಬುದನ್ನು ಬರವಣಿಗೆ ಯಲ್ಲಿ ಸರ್ಕಾರಕ್ಕೆ ಲಿಖಿತ ಮೂಲಕ ತಿಳಿಸುತ್ತಿದ್ದಾಗ್ಯೂ ಅದನ್ನು ಗಮನಿಸದೇ ಆ ಔಷಧಿಯನ್ನು ಅಲ್ಲಿಗೆ ಕಳುಹಿಸಿ ಅದು ಅಲ್ಲಿ ವೃಥಾ ಆಕ್ಯುಮ್ಯುಲೇಟಾಗಿ ಹಾಳಾಗುತ್ತಿದೆ, ಈ ವಿಚಾರವನ್ನು ಸರ್ಕಾರದವರು ಗಮನಕ್ಕೇ ತೆಗೆದುಕೊಳ್ಳುತ್ತಿಲ್ಲ. ಹೀಗ ಈ ದಿವಸ ಎಲ್ಲಿ ರೋಗಿಗಳಿದ್ದಾರೋ ಅಲ್ಲಿ ಔಷಧಿಯಿಲ್ಲ. ಎಲ್ಲಿ ರೋಗಿಗಳಿಲ್ಲವೋ ಅಲ್ಲಿ ಔಷಧಿ ಆಕ್ಯುಮ್ಯುಲೇಟಾಗಿ ಹಾಳಾಗುತ್ತಿದೆ. ನರಳುತ್ತಿರುವ ರೋಗಿಗಳಿರತಕ್ಕಲ್ಲಿಗೆ ಔಷಧಿಯನ್ನು ಒದಗಿಸದೆ ಅದನ್ನು ಎಲ್ಲಿ ರೋಗಿಗಳಿಲ್ಲವೋ ಅಲ್ಲಿಗೆ ಕಳುಹಿಸಿ ಅದನ್ನು ಅನಾವಶ್ಯಕವಾಗಿ ಹಾಳಾಗುವುದಕ್ಕೆ ಅವಕಾಶ ಕೊಡುತ್ತಿದ್ದಾರೆ ಇದರಿಂದ ಸರ್ಕಾರದ ಹಣ ವೃಥಾ ಹಾಳಾಗುತ್ತಿದೆ. ಸರ್ಕಾರದವರು ಈ ವಿಚಾರವನ್ನು ಕೂಡಲೇ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಬಹುಶಃ ಸರ್ಕಾರದಲ್ಲಿ ಅಷ್ಟು ಹೆಚ್ಚಿನ ಹಣ ಇರಲಿಕ್ಕಿಲ್ಲ. ಸರ್ಕಾರ ಪ್ರತಿಯೊಂದು ಆಸ್ಪತ್ರೆಗೂ 1500 ರೂಪಾಯಿನ ಔಷಧಿಯಾಗಲಿ ಅಥವಾ 200 ರೂಪಾಯಿನ ಔಷಧಿ ಯನ್ನಾಗಲಿ ಕಳುಹಿಸುವುದಕ್ಕೆ ಮುಂಚಿತವಾಗಿಯೇ ಆಯಾಯಾ ಆಸ್ಪತ್ರೆಯ ಡಾಕ್ಟರುಗಳಿಂದ ಅಲ್ಲಿಗೆ ಯಾವ ಯಾವ ಔಷಧಿಗಳು ಬೇಕೆನ್ನತಕ್ಕ ಬಗ್ಗೆ ಒಂದು ಲಿಸ್ಟನ್ನು ತರಿಸಿಕೊಂಡು ಅದರಂತೆ ಆಯಾಯಾ ಆಸ್ಪತ್ರೆಗಳಿಗೆ ಆಯಾಯಾ ಔಷಧಿಯನ್ನು ಕಳುಹಿಸುವಂತೆ ಮಾಡತಕ್ಕದ್ದು ಅತ್ಯವಶ್ಯಕ. ಹೀಗೆ ಮಾಡದಿದ್ದರೆ ಹಣ ವೃಥಾ ಹಾಳಾಗುತ್ತದೆ. ಕೆಲವು ಆಸ್ಪತ್ರೆಗಳ ಡಾಕ್ಟರುಗಳು ಅಲ್ಲಿಗೆ ಇಂಥ ಔಷದಿಗಳು ಬೇಡ ಎಂತ ಬರೆದಿರತಕ್ಕದನ್ನು ನಾನು ನೋಡಿದ್ದೇನೆ. ಹಾಗೆ ಅವರು ಬರೆದಿದ್ದರೂ ಅದನ್ನು ಈ ಇಲಾಖೆಯವರು ನೋಡದೆ ತಾವು ಮಾಮೂಲಿನಂತೆ ಕಳುಹಿಸತಕ್ಕ ರೀತಿಯಲ್ಲೇ ಕಳುಹಿಸಿದರೇನು ಪ್ರಯೋಜನ ಈ ಇಲಾಖೆ ಇದ್ದುದಕ್ಕೆ? ಈ ಇಲಾಖೆ ಇನ್ನು ಮುಂದಕ್ಕಾದರೂ ಈ ರೀತಿ ಸರ್ಕಾರದ ಬೊಕ್ಕಸದಲ್ಲಿರತಕ್ಕ ಹಣ ಹಾಳಾಗದಂತೆ ಯಾವ ಯಾವ ಆಸ್ಪತ್ರೆಗೆ ಏನೇನು ಔಷಧಿ ಗಳ ಅಗತ್ಯವಿದೆ ಎಂಬುದನ್ನು ಅವರಿಂದಲೇ ಪಟ್ಟಿ ತರಿಸಿಕೊಂಡು ಔಷಧಿಯನ್ನು ಒದಗಿಸುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಕೂಡಲೇ ಈ ವಿಚಾರಕ್ಕೆ ನಿಗಾ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಸ್ಪತ್ರೆಗಳಲ್ಲಿ ಕೆಲವು ರೋಗಿಗಳಿಗೆ ಊಟ ಕೊಡತಕ್ಕ ವ್ಯವಸ್ಥೆ ಇತ್ತು. ಅದರಲ್ಲೂ ನಮ್ಮ ಕೊಡಗು ಜಿಲ್ಲೆಯಲ್ಲಿ ಇಂಥ ನಿಯಮವಿತ್ತು. ಈಗ ಅದನ್ನು ಅಲ್ಲಿ ನಿಲ್ಲಿಸಿದ್ದಾರೆ. ಹಾಗೆ ಅದನ್ನು ನಿಲ್ಲಿಸಿರುವುದಕ್ಕೆ ಕಾರಣವೇನೆಂದು ಕೇಳಿದ್ದಕ್ಕೆ ಟೆಂಡರುಗಳನ್ನು ಕರೆಯತಕ್ಕ ವಿಚಾರದಲ್ಲಿ ಪ್ರೊಸೀಜರನ್ನು ಮಾರ್ಪಾಡು ಮಾಡುವುದಕ್ಕಾಗಿ ಆ ವಿಚಾರ ಪುನರ್ಪರಿಶೀಲನೆಯಲ್ಲಿದೆ, ಅದಕ್ಕಾಗಿ ಅದನ್ನು ತಡೆಹಿಡಿಯಲಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಇದೇನೂ ಅಂಥ ಪ್ರಾಮುಖ್ಯವಾದ ವಿಚಾರವಲ್ಲ. ಇದನ್ನು ಆಯಾ ಜಿಲ್ಲಾ ಮಟ್ಟದಲ್ಲಿ ತೀರ್ಮಾನ ಮಾಡಬಹುದಿತ್ತು. ಮುಖ್ಯವಾಗಿ ಆರೋಗ್ಯ ಇಲಾಖೆಯವರು ರೋಗಿಗಳಿಗೆ ಸೌಲಭ್ಯಗಳನ್ನು ಒದಗಿಸತಕ್ಕ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳಬೇಕೆಂಬುದನ್ನು ಆಲೋಚಿಸತಕ್ಕದ್ದು ಅತಿ ಮುಖ್ಯವಾದ ಕಾರ್ಯ. ಆದರೆ ಅದನ್ನು ಬಿಟ್ಟು ಇಂಥ ಪ್ರತಿಯೊಂದು ವಿಚಾರಗಳೂ ತೀರ್ಮಾನಕ್ಕಾಗಿ ಬೆಂಗಳೂರಿಗೇ ಬರಬೇಕು ಅವು ಇಲ್ಲಿಯೇ ಅಪ್ರೂವಾಗಬೇಕು ಎಂದರೇನು ? ಇದು ಅಂಥ ಮುಖ್ಯವಾದ ವಿಚಾರವೇನು ? ಆರೋಗ್ಯ ಇಲಾಖೆ ಯಿಂದ ಜನರಿಗಾಗತಕ್ಕ ಉಪಕಾರವಿದೇಯೇ ! ಈ ವರ್ಷದಲ್ಲಿ ಅಂದರೆ 1964-65 ರಲ್ಲಿ ಕೊಡಗು ಜಿಲ್ಲೆಯೊಂದರಿಂದಲೇ ಎಷ್ಟು ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಊಟವನ್ನು ಕೊಡಲಾಗುತ್ತಿತ್ತೋ ಅಲ್ಲ

(ಶ್ರೀ ಎ. ಪಿ. ಅಪ್ಪಣ್ಣ)

ಅದನ್ನು ನಿಲ್ಲಿಸಿದ್ದಾರೆ. ಇದರಿಂದ ಜನಕ್ಕೆ ಬಹಳ ತೊಂದರೆಯಾಗಿದೆ. ಇದನ್ನು ನೋಡಿದರೆ ಇವರ ಜನರಿಗೆ ಉಪಕಾರ ಮಾಡುವುದಕ್ಕೆ ಬದಲು ಈ ಆರೋಗ್ಯ ಇಲಾಖೆ ಇರುವುದು ಜನರಿಗಿನ್ನೂ ಹೆಚ್ಚಿನ ತೊಂದರೆಯನ್ನು ಕೊಡುವುದಕ್ಕೇನೋ ಎಂದು ಅನಿಸುತ್ತಿದೆ. ನಾನಿನ್ನು ಈ ವಿಚಾರದಲ್ಲಿ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಸರ್ಕಾರದವರು ಈಗಲಾದರೂ ಈ ವಿಚಾರವನ್ನು ಕೂಡಲೇ ಪರಿಶೀಲಿಸಿ ಎಲ್ಲೆಲ್ಲಿ ರೋಗಿಗಳಿಗೆ ಊಟದ ವ್ಯವಸ್ಥೆಯನ್ನು ಮಾಡಿದ್ದಾರೋ ಅಲ್ಲಿ ಊಟವನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡುವುದಲ್ಲದೆ, ಅಲ್ಲಿಗೆ ಅಗತ್ಯವಿರತಕ್ಕ ಔಷಧಿಗಳನ್ನು ಒದಗಿಸುವುದಕ್ಕೆ ಒಂದು ಕ್ರಮವಾದ ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಈ ಮೆಡಿಕಲ್ ಇಲಾಖೆಯ ವಿಚಾರವಲ್ಲಿ ಇದೇ ಸಂದರ್ಭದಲ್ಲಿ ನಾನು ಮತ್ತೊಂದು ವಿಚಾರವನ್ನು ನಿವೇದನೆ ಮಾಡಿಕೊಳ್ಳಬೇಕಾಗಿದೆ. ಯಾರಾದರೂ ಈ ವೈದ್ಯಕೀಯ ಇಲಾಖೆಗೆ ದಾನಿಗಳೂ ಅಥವಾ ಉದಾರಿಗಳೂ ಆದ ಜನರು ಮುಂದೆ ಬಂದು ಸಹಾಯ ಮಾಡುತ್ತೇವೆಂದು ಹೇಳಿದರೆ ಈ ಇಲಾಖೆಯವರು ನಿಜವಾಗಿಯೂ ಅವರಿಗೆ ಒಂದು ಉತ್ತೇಜನವನ್ನು ಕೊಡುತ್ತಿಲ್ಲ. ನಮ್ಮ ಕೊಡಗು ಜಿಲ್ಲೆಯಲ್ಲಿ ಒಬ್ಬ ದಾನಿಗಳು ಒಂದು ವಾರ್ಡನ್ನು ಕಟ್ಟಲು ತಾವಾಗೇ ಮುಂದೆ ಬಂದು ಸರ್ಕಾರದಲ್ಲಿ 20 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಿ ಇಲ್ಲಿಗೆ 2 ವರ್ಷಗಳಾಯಿತು. ಅವರು ಈ ರೀತಿ ಒಂದು ಬಾಂಡನ್ನೂ ಸಹಾ ಬರೆದುಕೊಟ್ಟಿದ್ದಾರೆ. ಆದರೆ ಸರ್ಕಾರದವರು ಆ ಕಟ್ಟಡ 20 ಸಾವಿರದಲ್ಲಿ ಆಗುವುದಿಲ್ಲ 30 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಸರ್ಕಾರದವರಿಗೆ ಆ ದಾನಿಗಳಿಂದ 20 ಸಾವಿರ ರೂಪಾಯಿಗಳನ್ನು ಸ್ವೀಕಾರ ಮಾಡಿ ಜನರಿಗೆ ಉಪಕಾರ ಮಾಡುವುದಕ್ಕಾಗುವುದಿಲ್ಲವೆ? ಹೀಗಾದರೆ ಇನ್ನು ಯಾವ ಉದಾರಿಗಳಾಗಲೀ ದಾನಿಗಳಾಗಲೀ ಹೀಗೆ ಮುಂದೆ ಬಂದಾರು? ಜನರ ಹಿತರಕ್ಷಣೆ ಮಾಡಬೇಕೆಂಬ ಇರಾದೆ ಸರ್ಕಾರಕ್ಕಿದ್ದರೆ ಆ ಹಣ ಹಾಗೆ ಅಲ್ಲಿ ಎರಡೂವರೆ ವರ್ಷಗಳಿಂದ ಇರಬೇಕಾಗಿತ್ತೇನು? ಸರ್ಕಾರಕ್ಕೆ ಬರುತ್ತಿದ್ದ 20 ಸಾವಿರ ರೂಪಾಯಿಗಳನ್ನು ಕೈಬಿಡುವುದು ಯಾವ ನೀತಿ? ಈ ಇಲಾಖೆ ಹೀಗಾದರೆ ಯಾವ ಉದಾರಿ ಜನರಿಂದಲೂ ಏನೂ ಪ್ರಯೋಜನ ಪಡೆಯಲು ಸಾಧ್ಯವಾಗುವುದಿಲ್ಲ. ಹೀಗಾಗಿ ಈ ದಿವಸ ಆ ಜನರಲ್ಲೂ ಸಹಾ ಒಂದು ರೀತಿಯ ಭಾವನೆ ಬಂದು ನಾವಿನ್ನು ಈ ಸರ್ಕಾರಿ ಆಸ್ಪತ್ರೆಗಳಿಗೆ ದಾನ ಮಾಡುವುದೇ ಬೇಡ ಈ ದಿವಸ ಅಲ್ಲಿ ಕಟ್ಟಲಾಗುತ್ತಿರುವ ಅಮೆರಿಕನ್ ಎಯಿಡ್ ಆಸ್ಪತ್ರೆಗೆ ಆ ಹಣವನ್ನು ಕೊಟ್ಟುಬಿಡೋಣ ಎಂದು ಮನಸ್ಸು ಮಾಡಿದ್ದಾರೆ ಈಗಲಾದರೂ ನಮ್ಮ ಸರ್ಕಾರದವರು ಆ 20 ಸಾವಿರ ರೂಪಾಯಿಗಳನ್ನು ಸ್ವೀಕಾರ ಮಾಡಿ ಅದನ್ನು ಉಪಯೋಗ ಮಾಡದೆ, ಆ ಹಣ ಬೇರೆ ಕಡೆಗೆ ಹೋಗುವುದಕ್ಕೆ ಬಿಟ್ಟರೆ ನಾವು ನಿಜವಾಗಿಯೂ ನಮ್ಮಲ್ಲಿರತಕ್ಕ ದಾನಿಗಳಿಗೆ ಜನೋಪಯುಕ್ತವಾದ ಕಾರ್ಯಗಳನ್ನು ಮಾಡುವುದಕ್ಕೆ ನಾವು ಉತ್ತೇಜನ ಕೊಟ್ಟಹಾಗೆ ಆಗುವುದಿಲ್ಲ. ಆದರೆ ಆ ಹಣದಲ್ಲಿ ಆ ಕೆಲಸವನ್ನು ಮಾಡುವುದಕ್ಕೆ ಕಷ್ಟವಿರಬಹುದು. ಆದರೆ ಅದು ಅಷ್ಟು ದೊಡ್ಡದಲ್ಲ. ಆದಷ್ಟು ಜಾಗ್ರತೆ ಸರ್ಕಾರದವರು ಮುಂದೆ ಬಂದು ಇಂಥ ಉದಾರಿಗಳಿಗೆ ಉತ್ತೇಜನ ಕೊಡಬೇಕು. ಆ ಜನರಿಗೆ ಇನ್ನೂ ಹೆಚ್ಚು ಹೆಚ್ಚಾಗಿ ಮುಂದೆ ಬಂದು ಇಂಥ ಕೆಲಸಗಳನ್ನು ಕೈಗೊಳ್ಳುವಂತೆ ಅವರಿಗೊಂದು ಉತ್ತೇಜನ ತುಂಬಬೇಕು. ಅಂಥವರಿಂದ ಜನಕ್ಕಾಗತಕ್ಕ ಉಪಕಾರವನ್ನು ಸರ್ಕಾರ ಉಪಯೋಗಿಸಿಕೊಳ್ಳಬೇಕು. ಅದನ್ನು ಬಿಟ್ಟು ಅವರಿಗೆ ಹೀಗೆಲ್ಲಾ ಹಿಮ್ಮುಖಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಇಂಥ ಜನರಿಗೆ ಸರ್ಕಾರ ಆದಷ್ಟೂ ಅನುಕೂಲಗಳನ್ನೊದಗಿಸಬೇಕು.

ಇನ್ನು ಮಲೆನಾಡು ಪ್ರದೇಶಕ್ಕೆ ಡಾಕ್ಟರುಗಳೇ ಬರುವುದಿಲ್ಲ ಎಂಬ ಒಂದು ಕೂಗು ಕೇಳಿಬರುತ್ತಿದೆ. ಆದರೆ ಈಗ ಡಾಕ್ಟರುಗಳನ್ನು ರೆಕ್ರೂಟ್ ಮಾಡಿಕೊಳ್ಳುವುದರಲ್ಲಿ ಏನು ನಡೆಯುತ್ತಿದೆ ಎಂದರೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕಾಗಿ ಇಂಟರ್‌ವ್ಯೂ ಮಾಡಿ 6 ತಿಂಗಳು ಕಳೆದಾಗ್ಯೂ ಅವರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಿಲ್ಲ. ಅಲ್ಲಿಯತನಕ ಅವರೇನು ಮಾಡಬೇಕು! ಅವರೇನು ಸ್ವಂತ ಆಸ್ಪತ್ರೆಯನ್ನು ನಡೆಸಬೇಕೇ ಅಥವಾ ಅವರು ಖಾಸಗೀ ಕೆಲಸಕ್ಕೆ ಸೇರಬೇಕೇ? ಸರ್ಕಾರದವರು ಕೆಲಸವನ್ನು ಕೊಡುವತನಕ ಅವರೇನು ಮಾಡಬೇಕು! ಹೀಗಾದರೆ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಕಡಮೆಯಾಗದೆ ಇನ್ನೇನು? ಅದಕ್ಕೆ ಕಾರಣ ಇದೇ. ಹೀಗೆ ಈ ದಿವಸ ಇಂಟರ್‌ವ್ಯೂ ಆದ ಜನರು ಬೀದಿಯಲ್ಲಿ ಅಲೆಯುತ್ತಿದ್ದಾರೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೇ ಗಮನ ಕೊಡಬೇಕು. ಆದಷ್ಟೂ ಡಾಕ್ಟರುಗಳಿಗೆ ಈ ಇಲಾಖೆಗೆ ಸೇರುವಂತೆ ಉತ್ತೇಜನ ಕೊಟ್ಟು ಮಲೆನಾಡಿಗೆ ಬರತಕ್ಕ ಡಾಕ್ಟರುಗಳಿಗೆ ಹೆಚ್ಚಿನ ಅಲೋಯನ್ಸ್ ಕೊಟ್ಟು ಅವರು ಅಲ್ಲಿ ಜನಸೇವೆ ಮಾಡುವಂತೆ ಮಾಡಬೇಕೆಂದು ಹೇಳಿ, ಇಷ್ಟು ವಿಚಾರಗಳಲ್ಲಿ ನನ್ನ ಸಲಹೆಯನ್ನು ಸರ್ಕಾರದವರ ಮುಂದಿಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಯಷ್ಟು ನಮ್ಮ ರಾಜ್ಯದ ಬೇರೆ ಯಾವ ಒಂದು ಇಲಾಖೆಯೂ ಕೂಡ ಅವ್ಯವಸ್ಥಿತವಾಗಿ ನಡೆಯುತ್ತಿಲ್ಲವೆಂದು ನನಗೆ ಅನಿಸುತ್ತಾ ಇದೆ. ಈ ಇಲಾಖೆಗಳ ಬಗ್ಗೆ ಸದಸ್ಯರು ಮಾಡುವ ಟೀಕೆಗಳಿಗಾಗಲಿ ಅಥವಾ ಸಾರ್ವಜನಿಕ ಟೀಕೆಗಳಿಗಾಗಲಿ ಈ ಇಲಾಖೆ ಏನೊಂದೂ ಜಗ್ಗದೆ ಇದೆ. ಇಲಾಖೆಯ ಸಮಸ್ಯೆ ಏನು, ಇದನ್ನು ಹೇಗೆ ಬಗೆಹರಿಸಲು ಸಾಧ್ಯ ಅಥವಾ ಏನಾದರೂ ಪ್ರಯತ್ನ ನಡೆದಿದೆಯೇ ಎಂದರೆ ಎಳ್ಳಷ್ಟೂ ಪ್ರಯತ್ನ ನಡೆದಿಲ್ಲ ಇದರ ಬಗ್ಗೆ ಮಂತ್ರಿಗಳಿಗೆ ಹತ್ತಾರು ಜನ ಸದಸ್ಯರು ಮತ್ತು ಸಾರ್ವಜನಿಕರು ಎಷ್ಟೋ ಮನವಿಗಳನ್ನು ಕೊಟ್ಟರೂ ಕೂಡ ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ ಎಂದು ಒಪ್ಪಿಕೊಳ್ಳುವುದಿಲ್ಲ 'ಆಗಲಿ, ಮಾಡೋಣ, ನೋಡೋಣ ಎಂದು ಯಾರು ಹೋದರೂ ಕೂಡ ಭರವಸೆ ಕೊಡುವ ಪದ್ಧತಿ ಮಾತ್ರ ಇಟ್ಟಿದ್ದಾರೆ. ಯಾವ ಒಂದು ಕೆಲಸವು ಕೂಡ, ಯಾವ ಒಂದು ಸಮಸ್ಯೆಯೂ ಕೂಡ ಬಗೆಹರಿದಿಲ್ಲ ಎಂದು ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಇಲಾಖೆಯಲ್ಲಿ ವೈದ್ಯರ ಅಭಾವ ಏನು ಇದೆ ಅಥವಾ ಆಸ್ಪತ್ರೆಗಳಲ್ಲಿ ಸ್ಥಳಾಭಾವ ಮತ್ತು ಆಸ್ಪತ್ರೆಗಳ ಆಡಳಿತದಲ್ಲಿರತಕ್ಕ ಲೋಪದೋಷಗಳನ್ನು ಸರಿಮಾಡುವ ಮೂಲಭೂತವಾದ ಈ ಮೂರು ವಿಷಯಗಳ ಬಗ್ಗೆ ಕಳೆದ ಎಷ್ಟೋ ವರ್ಷಗಳಿಂದ ಏನೇನು ಸಮಸ್ಯೆಗಳು ಇದ್ದವೋ ಆ ಸಮಸ್ಯೆಗಳು ಅದೇ ರೀತಿಯಲ್ಲಿ ಇಂದಿಗೂ ಕೂಡ ಮುಂದುವರಿಯುತ್ತಾ ಇವೆ. ವೈದ್ಯರ ಅಭಾವ ಇದೆ ಎಂಬುದನ್ನು ಮಾನ್ಯ ಮಂತ್ರಿಗಳು ಅನೇಕ ಸಲ ಒಪ್ಪಿಕೊಂಡಿರುವ ಹಾಗೆ ಹಳ್ಳಿಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಶೇಕಡ 30 ರಷ್ಟು ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲದೇ ಇರುವಂತಹ ಪರಿಸ್ಥಿತಿ ಇದೆ. ಹಾಗಿದ್ದರುಕೂಡ ಡಾಕ್ಟರುಗಳಿಗೆ ಎಷ್ಟು ಉತ್ತೇಜನ ಕೊಡಬೇಕೋ ಅಷ್ಟು ಕೊಡುವುದಕ್ಕೆ ನಮ್ಮ ಸರ್ಕಾರ ತಯಾರಾಗಿಲ್ಲ. ಅನೇಕ ಸಾರಿ ಅನೇಕ ಜನ ಮಾನ್ಯ ಸದಸ್ಯರು ಸಲಹೆ ಮಾಡಿರುವಹಾಗೆ ಹಳ್ಳಿಗಾಡುಗಳಿಗೆ ಡಾಕ್ಟರುಗಳು ಬರುವುದು ಬಹಳ ಕಷ್ಟವಾಗಿದೆ, ಅವರನ್ನು ಅಲ್ಲಿಗೆ ಪೋಸ್ಟ್ ಮಾಡಿದರು ಕೂಡ ಅವರು ಹೋಗುವುದಿಲ್ಲ ಎಂದು ಹೇಳುತ್ತಾ ಇದ್ದಾರೆ. ಯಾರು ಹೋಗುವುದಕ್ಕೆ ತಯಾರಾಗಿದ್ದಾರೋ ಅಂತಹವರುಗಳಿಗೆ ಸ್ಪೆಷಲ್ ಅಲೋಯನ್ಸ್ ಅಂತ ಹೇಳಿ ನೂರು ರೂಪಾಯಿಗಳಾದರೂ ಕೊಟ್ಟು ಡಾಕ್ಟರುಗಳು ಹಳ್ಳಿಗಳಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದರೆ ಅದಕ್ಕೆ ಅಸ್ಪದ ಮಾಡಿ ಕೊಡುತ್ತಿಲ್ಲ. ಆ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಹಳ್ಳಿಗಳಲ್ಲಿ ಕಾಂಪೌಂಡರುಗಳು, ನರ್ಸ್‌ಗಳು, ಇತರ ಸಿಬ್ಬಂದಿ ಮತ್ತು ಕಟ್ಟಡ ಎಲ್ಲ ಇರುತ್ತವೆ ಆದರೆ ಡಾಕ್ಟರುಗಳು ಮಾತ್ರ ಇರುವುದಿಲ್ಲ. ಡಾಕ್ಟರುಗಳನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದೇ ಇದ್ದರೆ ಆಸ್ಪತ್ರೆಗಳನ್ನು ಪ್ರಾರಂಭಿಸುವುದರಲ್ಲಿ ಏನು ಅರ್ಥವಿದೆ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಜೋಗಿ ಪಾಳ್ಯವೆಂಬ ಒಂದು ಹಳ್ಳಿ ಇದೆ. ಆರೋಗ್ಯಮಂತ್ರಿಗಳು ಒಂದೂವರೆವರ್ಷದ ಹಿಂದೆ ಅಲ್ಲಿ ಒಂದ ಆಸ್ಪತ್ರೆ ಪ್ರಾರಂಭಮಾಡಿದರು ಅಲ್ಲಿಗೆ ಕಾಂಪೌಂಡರು, ಇತರ ಸಿಬ್ಬಂದಿ ಮತ್ತು ಔಷಧಿ ಎಲ್ಲಾ ಒದಗಿಸಿದ್ದಾರೆ ಆದರೆ ಇವತ್ತಿನವರೆಗೂ ಕೂಡ ಅಲ್ಲಿಗೆ ಒಬ್ಬ ಡಾಕ್ಟರು ಪೋಸ್ಟ್ ಆಗಿಲ್ಲ. ಅದರ ಬಗ್ಗೆ ತಾಲ್ಲೂಕು ಬೋರ್ಡಿನವರು ಮತ್ತು ಇತರರು ಅನೇಕ ಸಾರಿ ಹೇಳಿದ್ದಾರೆ. ಮನವಿಗಳನ್ನು ಅರ್ಪಿಸಿದ್ದಾರೆ ಆದರೂ ಕೂಡ ಡಾಕ್ಟರನ್ನು ಪೋಸ್ಟ್ ಮಾಡಬೇಕೆನ್ನುವ ಯೋಚನೆಯೇ ಸರ್ಕಾರದವರಿಗೆ ಇಲ್ಲ. ಇದರ ಬಗ್ಗೆ ಅಧಿಕಾರಿಗಳಿಗೆ ಮನವಿ ಕೊಟ್ಟೆ, ಮಂತ್ರಿಗಳಿಗೂ ಸಹ ಹೇಳಿದ್ದು ಆಯಿತು. ಅದರಲ್ಲೂ ಈ ಇಲಾಖೆಯ ಡೈರೆಕ್ಟರಂತೂ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳುವಂತೆ ಕರೀ ನವಾಬರು ಇದ್ದ ಹಾಗೆ ಇದ್ದಾರೆ. ಅವರೊಡನೆ ಮಾತನಾಡಿದ್ದೇ ಆದರೆ, ಅವರನ್ನು ಏನಾದರೂ ಕೇಳಿದ್ದೆ ಆದರೆ ಬಹಳ ತಿರಸ್ಕಾರ ಮನೋ ಭಾವದಿಂದ ಮಾತನಾಡುತ್ತಾರೆ. ಏನಾದರೂ ಹೇಳಿದರೆ 'ಆಗಲಿ ನೋಡೋಣ ಹೋಗ್ರಿ' ಎಂದು ಅನ್ನುತ್ತಾರೆ. ಶಾಸನ ಸಭಾಸದಸ್ಯರು ಹೋದರೂ ಕೂಡ ಅವರು ಹೇಳುವುದನ್ನು ಕೇಳುವಷ್ಟು ಕೂಡ ಅವರಲ್ಲಿ ಸಮಾಧಾನ ಇಲ್ಲ. ಇದಕ್ಕೆ ಕಾರಣ ನನಗೆ ಕೆಲವು ಸ್ನೇಹಿತರು ಹೇಳಿದ್ದಾರೆ, ಅಲ್ಲಿರತಕ್ಕ ಅಧಿಕಾರಿಗಳು ಮಾನ್ಯ ಮಂತ್ರಿಗಳ ಜೊತೆಯಲ್ಲಿ ಓದಿದವರಂತೆ ; ಅದ್ದರಿಂದ ಅವರೂ ಕೂಡ ಮಂತ್ರಿಗಳಂತೆ ಇದ್ದಾರೆ. ಮಂತ್ರಿಗಳಿಗೆ ಇರುವ ಅಧಿಕಾರ ಅವರಿಗೂ ಬಂದ ಹಾಗೆ ಕಾಣುತ್ತದೆ. ಇಲಾಖೆಯಲ್ಲಿ ಡಾಕ್ಟರುಗಳ ಅಭಾವ ಕಡಿಮೆಯಾಗಬೇಕಾಗಿದ್ದರೆ ಡಾಕ್ಟರುಗಳಿಗೆ ಹೆಚ್ಚಿನ ಉತ್ತೇಜನ ಕೊಡಬೇಕು. ಅದರಲ್ಲೂ ಹಳ್ಳಿಗಾಡಿನಲ್ಲಿ ಕೆಲಸ ಮಾಡುವವರಿಗೆ ನೂರು ರೂಪಾಯಿ ಹೆಚ್ಚಿಗೆ ಅಲೋಯನ್ಸ್ ಕೊಟ್ಟರೆ ಹಳ್ಳಿಗಳಿಗೆ ಅವರು ಹೋಗುತ್ತಾರೆ. ಡಾಕ್ಟರುಗಳಿಗೆ ಕಂಡೆನ್ಸ್ಡ್ ಎಂ. ಬಿ. ಬಿ. ಎಸ್. ಕೋರ್ಸ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಅವರ ಪೈಕಿ ಕಂಡೆನ್ಸ್ಡ್ ಎಂ. ಬಿ. ಬಿ. ಎಸ್. ಕೋರ್ಸ್ ಮಾಡಿಕೊಂಡಿರುವವರು ಯಾರಿದ್ದಾರೆ ಅವರಿಗೆ 3 ವರ್ಷವಾದರೂ ಕೂಡ ಇನ್ನು ಎಲ್. ಎಂ. ಪಿ. ಸ್ಕೇಲ್‌ನ್ನೇ ಕೊಟ್ಟಿದ್ದಾರೆ. ನಾನೇ ಖುದ್ದಾಗಿ ಎರಡು ಮೂರು ಕಾಗದಗಳನ್ನು ಮಾನ್ಯ ಮಂತ್ರಿಗಳಿಗೆ ಬರೆದೆ, ಡೈರೆಕ್ಟರಿಗೂ ಕೂಡ ಬರೆದಿದ್ದೇನೆ—ಅವರುಗಳು ಬೇರೆ ಮಿಷನ್ ಆಸ್ಪತ್ರೆಗಳಿಗೆ ಅಥವಾ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಹೊರಟು ಹೋಗುತ್ತಾರೆ ಅದ್ದರಿಂದ ಅವರಿಗೆ ಎಂ. ಬಿ. ಬಿ. ಎಸ್. ಸ್ಕೇಲ್ ಕೊಡಿ

(ಶ್ರೀ ಪಿ. ವೆಂಕಟಗಿರಿಯಪ್ಪ)

ಎಂದು ಕೇಳಿಕೊಂಡಿದ್ದೇನೆ. ಇದುವರೆಗೂ ಕೂಡ ಆ ರಿಕಾರ್ಡಿನ ಬಗ್ಗೆ ಏನೂ ತೀರ್ಮಾನವಾಗಿಲ್ಲ. ಇನ್ನು ಎರಡು ವರ್ಷದಲ್ಲಿ ತೀರ್ಮಾನವಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಅವರುಗಳು ಹೆಚ್ಚು ಸಂಬಳ ಸಿಕ್ಕುವ ಕಡೆಗೆ ಹೆಚ್ಚು ಅನುಕೂಲವಿರುವ ಕಡೆಗೆ ಹೊರಟು ಹೋಗುತ್ತಾರೆ. ಅವರು ನಮ್ಮ ಸರ್ಕಾರದ ಕೆಲಸದಲ್ಲಿ ಇದ್ದು ಕೆಲಸ ಮಾಡಬೇಕಾಗಿದ್ದರೆ ಅವರಿಗೆ ಹೆಚ್ಚಿನ ಸೌಲಭ್ಯವನ್ನು ಕೊಡುವುದಕ್ಕೆ ತಾವು ಹಿಂದು ಮುಂದು ನೋಡಬಾರದು. ಮಾನ್ಯ ಸದಸ್ಯರು ಹೇಳಿದರೂ ಕೂಡ ತಾವು ನಿಧಾನ ಮಾಡುತ್ತಾ ಹೋದರೆ, ಸದಸ್ಯರು ಹೇಳಿದುದಕ್ಕೆ ಬೆಲೆ ಕೊಡದೇ ಹೋದರೆ ಡಾಕ್ಟರು ಗಳ ಅಭಾವ ಯಾವ ರೀತಿ ನಿವಾರಣೆಯಾಗುತ್ತದೆ ಎಂಬುದು ನನಗಂತೂ ಅರ್ಥವಾಗುವುದಿಲ್ಲ. ನಮ್ಮ ಜಿಲ್ಲೆಯ ವಿಷಯ ಹೇಳುವುದಾದರೆ ಕೋಲಾರ ಜಿಲ್ಲೆಯ ರೂರಲ್ ಡಿಸ್ಪೆನ್ಸರಿಗಳಲ್ಲಿ ಡಾಕ್ಟರು ಗಳು ಇಲ್ಲ; ಅದರ ಬಗ್ಗೆ ಎಷ್ಟೋ ಸಾರಿ ಮಾನ್ಯ ಮಂತ್ರಿಗಳಿಗೆ ಅಲ್ಲಿನ ಸಾರ್ವಜನಿಕರು ಮತ್ತು ಶಾಸನ ಸಭೆಯ ಸದಸ್ಯರು ಎಲ್ಲರೂ ಕೂಡ ಹೇಳಿದ್ದಾರೆ ಅವರೂ ಕೂಡ ಏನೂ ಕ್ರಮ ಕೈಕೊಂಡಿಲ್ಲ. ಕೋಲಾರದ ಎಸ್. ಎನ್. ಆರ್. ಆಸ್ಪತ್ರೆಯಲ್ಲಿ ಸೀಟುಗಳ ಅಭಾವ ಬಹಳ ಇದೆ. ಅದರಲ್ಲೂ ಕೂಡ ಬಡವರಿಗೆ ಸೀಟು ಸಿಕ್ಕದೇ ಹತ್ತಾರು ಜನರನ್ನು ಒಂದು ದಿನಕ್ಕೆ ವಾಪಸ್ಸು ಕಳುಹಿಸುತ್ತಾ ಇದ್ದಾರೆ. ಅನೇಕ ಜನ ಪೇಷೆಂಟುಗಳನ್ನು ಆಸ್ಪತ್ರೆಯ ವರಾಂಡಾದಲ್ಲಿ ಮಲಗಿಸಿದ್ದಾರೆ ಇದನ್ನು ನಾನು ಖುದ್ದಾಗಿ ನೋಡಿದ್ದೇನೆ. ಅಲ್ಲಿಗೆ ಹತ್ತಾರು ಬಾರಿ ಹೋಗಿದ್ದೇನೆ. ಅಲ್ಲಿ ಫಸ್ಟ್ ಫ್ಲೋರ್ ಕಟ್ಟಿಸಲು ಟೆಂಡರ್ ಕರೆಯುವುದಕ್ಕೆ ಹೇಳುತ್ತೇನೆ ಎಂದು ಅಲ್ಲಿಗೆ ಮಾನ್ಯ ಮಂತ್ರಿಗಳು ಬಂದಿದ್ದಾಗ ಹೇಳಿದ್ದರು. ಆದರೆ ಅದು ಸಾಧ್ಯವಿಲ್ಲ ಎಂದು ಹೇಳಿ ಅವರ ಇಲಾಖೆಯ ಮುಖ್ಯಾಧಿಕಾರಿಗಳು ಅಬ್ಜೆಕ್ಷನ್ ಹಾಕಿ ದರು. ಅದು ಇಲ್ಲ ಅಂತ ಆಯಿತು, ಪುನಃ ಮಾನ್ಯ ಮಂತ್ರಿಗಳನ್ನು ಕೇಳಿದ್ದಕ್ಕೆ ವಿಚಾರಿಸುತ್ತೇವೆ, ಮಾಡಿಸುತ್ತೇನೆ ಎಂದು ತಿಳಿಸುತ್ತಾ ಇದ್ದಾರೆ. ಬಡ್ಜೆಟ್‌ನಲ್ಲೂ ಸಹ ಇದಕ್ಕೆ ಹಣ ಇಲ್ಲ. ಅದಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಖರ್ಚಾಗಬಹುದು ಎಂದು ಅಂದಾಜು ಮಾಡಲಾಗಿದೆ. ಅದೇಕೇ ಈ ರೀತಿ ಮಾಡುತ್ತಾ ಇದ್ದಾರೋ ನನಗೆ ಅರ್ಥವಾಗುತ್ತಾ ಇಲ್ಲ, ಕಾಂಗ್ರೆಸ್ ಸದಸ್ಯರು ಆ ಕ್ಷೇತ್ರ ದಿಂದ ಬಂದಿಲ್ಲ ಎಂದು ಈ ರೀತಿ ಮಾಡುತ್ತಾ ಇದ್ದಾರೋ ಏನೋ ಎಂದು ನನಗೆ ಅನ್ನಿಸುತ್ತಾ ಇದೆ. ಮಾನ್ಯ ಮಂತ್ರಿಗಳಿಗೆ ಒತ್ತಾಯಪೂರ್ವಕವಾಗಿ ಹೇಳುವುದೇನೆಂದರೆ, ಆ ರೀತಿ ಭರವಸೆ ಕೊಟ್ಟು ಜನಗಳ ಮುಂದೆಲ್ಲಾ ಹೇಳಿ ಆ ಒಂದು ಆಸ್ಪತ್ರೆಯಲ್ಲಿರತಕ್ಕ ರೋಗಿಗಳ ಕಷ್ಟವನ್ನೆಲ್ಲಾ ಖುದ್ದಾಗಿ ನೋಡಿ ಈ ರೀತಿ ಅಧಿಕಾರಿಗಳ ಕೈಯಲ್ಲಿ ಸಿಕ್ಕಿಕೊಂಡು ಅಲ್ಲಿಗೆ ಫಸ್ಟ್‌ಫ್ಲೋರ್ ಹಾಕಿಸುವುದಕ್ಕೆ ಅಶಕ್ತರಾದರೆ ನಿಜವಾಗಿಯೂ ಕೂಡ ಈ ಇಲಾಖೆಯನ್ನು ನಡೆಸುವುದಕ್ಕೆ ತಾವು ದಕ್ಷರಾದ ಮಂತ್ರಿ ಗಳೇ ಅಧಿಕಾರಿಗಳಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಶಕ್ತಿ ಇದೆಯೇ ?, ಸಾಧ್ಯವೇ ? ಎಂಬುದನ್ನು ಕೇಳಬಯಸುತ್ತೇನೆ.

ಅಲ್ಲಿ ಒಂದು ಸ್ಯಾನಿಟೋರಿಯಂ ಆಸ್ಪತ್ರೆ ಇದೆ ಅದರ ಪರಿಸ್ಥಿತಿ ಹೇಗಿದೆ ಎಂದರೆ ಅಲ್ಲಿಯೂ ಸ್ಥಳದ ಅಭಾವ ಅಲ್ಲಿನ ರೋಗಿಗಳಿಗೆ ಕೊಡಬೇಕಾದ ಔಷಧಿ, ಹಾಲು ಮೊಸರು ಇವುಗಳಾವುವೂ ಕೂಡ ಅಲ್ಲಿರತಕ್ಕ ರೋಗಿಗಳಿಗೆ ಸೇರುತ್ತಾ ಇಲ್ಲ. ಅವೆಲ್ಲವೂ ಅಲ್ಲಿರತಕ್ಕ ಕೆಲವು ಅಧಿಕಾರಿಗಳ ಕೈಗೆ ಸೇರಿ ದುರ್ವಿನಿಯೋಗವಾಗುತ್ತಾ ಇವೆ. ಹೀಗಿರುವಾಗ ಅದನ್ನು ವಿಚಾರ ಮಾಡುವುದಕ್ಕೆ ಯಾರಾ ದರೂ ತಮ್ಮ ಅಧಿಕಾರಿಗಳು ಇದ್ದಾರೆಯೇ ಇಲ್ಲವೇ ಎಂದು ಅನ್ನಿಸುತ್ತಾ ಇದೆ. ಎಷ್ಟೋ ಸಂದರ್ಭ ಗಳಲ್ಲಿ ಈ ವಿಷಯಗಳನ್ನೆಲ್ಲಾ ನಮಗೆ ಮನಸ್ಸು ಇಲ್ಲದೇ ಇದ್ದರೂ, ಏನೂ ಪ್ರಯೋಜನ ವಾಗುವು ದಿಲ್ಲ ಎಂದು ತಿಳಿದಿದ್ದರೂ ಕೂಡ ತಮಗೆ ತಿಳಿಸಿದ್ದೇನೆ ಏನೂ ಪ್ರಯೋಜನವಾಗಿಲ್ಲ. ಈ ರೀತಿಯಲ್ಲಿ ಆಸ್ಪತ್ರೆಗಳ ಆಡಳಿತ ನಡೆಯುತ್ತಾ ಇದೆ. ಮುಖ್ಯವಾಗಿ ಸರ್ಕಾರದವರನ್ನು ಈ ಸಮಯದಲ್ಲಿ ಒತ್ತಾಯ ಪಡಿಸುವುದೇನೆಂದರೆ ಶ್ರೀಮಾನ್ ಅಪ್ಪಣ್ಣನವರು ಹೇಳಿದ ಹಾಗೆ ಎಷ್ಟು ಆಸ್ಪತ್ರೆಗಳಿಗೆ ಡಾಕ್ಟರುಗಳು ಇದ್ದಾರೋ ಅಷ್ಟು ಆಸ್ಪತ್ರೆಗಳನ್ನು ಇಟ್ಟುಕೊಳ್ಳಿ ಸಮಾರಂಭ ನಡೆಸುತ್ತಾರೆ, ಬಿನ್ನ ವತ್ತಳೆ ಕೊಡುತ್ತಾರೆ ಎಂದು ಹೇಳಿ ಹೊಸ ಹೊಸ ಆಸ್ಪತ್ರೆಗಳನ್ನು ಕೊಡುವುದಕ್ಕೆ ಇನ್ನು ಮುಂದೆ ಹೋಗಬೇಡಿ. ಯಾವ ಆಸ್ಪತ್ರೆಯ ಉದ್ಘಾಟನೆಯ ಸಮಾರಂಭಕ್ಕೂ ಹೋಗಬೇಡಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣನವರು ಹೇಳಿದ ಹಾಗೆ ಇನ್ನು ಮುಂದೆ ಆಸ್ಪತ್ರೆಗಳಿಗೆ ಡಾಕ್ಟರು ಗಳನ್ನೊದಗಿಸಲು ಸಾಧ್ಯವಾಗದಿದ್ದರೆ ಹೊಸದಾಗಿ ಆಸ್ಪತ್ರೆಗಳನ್ನು ತೆರೆಯಲೇ ಬೇಡಿ. ಇಲಾಖೆ ಯಲ್ಲಿರುವ ಡಾಕ್ಟರಿಗೆ ನ್ಯಾಯವಾಗಿ ಸಿಕ್ಕಬೇಕಾದ ಬಡ್ತಿ ದೊರೆಯುವಂತೆ ನೋಡಿಕೊಳ್ಳಬೇಕು ಮತ್ತು ಹಳ್ಳಿಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಡಾಕ್ಟರುಗಳಿಗೆ ಸರಕಾರಕ್ಕೆ ಕೆಲವು ಲಕ್ಷ ಹೆಚ್ಚಾಗಿ ಖರ್ಚಾದರೂ ಚಿಂತೆಯಿಲ್ಲ, ನೂರು ರೂಪಾಯಿಗಳಿಗಿಂತ ಹೆಚ್ಚಾಗಿ ಸ್ಪೆಷಲ್ ಅಲೋಯನ್ಸ್ ಆದರೂ ಕೊಟ್ಟು ಅಂಥವರಿಗೆ ಹೆಚ್ಚು ಪ್ರೋತ್ಸಾಹ ಕೊಡುವ ಏರ್ಪಾಡುಮಾಡಿದರೆ ಡಾಕ್ಟರುಗಳು

ಇಲಾಖೆಯಲ್ಲೇ ಉಳಿದು ಹಳ್ಳಿಗಾಡಿಗೆ ಹೋಗುತ್ತಾರೆ. ಇನ್ನೆರಡು ವರ್ಷಗಳಲ್ಲಿ ಇಲಾಖೆಯಲ್ಲಿರುವ ಅರ್ಧಕ್ಕಿಂತ ಹೆಚ್ಚು ಮಂದಿ ಡಾಕ್ಟರುಗಳು ಇಲಾಖೆಯನ್ನು ಬಿಟ್ಟು ಬೇರೆ ಕಡೆಗೆ ಹೋಗುವ ಭಯವಿದೆ, ಅದಕ್ಕೆ ಅವಕಾಶಮಾಡಬೇಡಿ, ಅಂಥ ಪರಿಸ್ಥಿತಿ ಬರಬಾರದು. ಡಾಕ್ಟರುಗಳಿಗೆ ಖಂಡಿತ ನ್ಯಾಯವಾಗಿ ಸಿಕ್ಕಬೇಕಾದ ಪ್ರಮೋಷನ್ ಕೊಡಬೇಕು. ಈ ದಿವಸ ಕೋಲಾರದ ಆಸ್ಪತ್ರೆಗೆ ಬೇಕಾದ ಸೌಕರ್ಯ ಒದಗಿಸಲು ಹಣದ ಅಭಾವವಿದೆ ಎಂದು ಹೇಳದೆ ವಿಶ್ವಾಸವಿಟ್ಟು ಅಲ್ಲಿನ ಬಡ ಜನರ ಹಿತದೃಷ್ಟಿಯಿಂದ ಆಸ್ಪತ್ರೆಯ ಫಸ್ಟ್ ಫ್ಲೋರನ್ನು ಕಟ್ಟಲು ಸಹಾಯಮಾಡಬೇಕು ಮತ್ತು ಆಸ್ಪತ್ರೆಯ ಆಡಳಿತ ಸ್ವಚ್ಛವಾಗಿ ನಡೆಯುವಂತೆ ನೋಡಿಕೊಂಡು ಜನರಿಗೆ ಔಷಧ, ರೋಗಿಗಳಿಗೆ ಆಹಾರ ಮುಂತಾದುವು ಸರಿಯಾಗಿ ಸಿಕ್ಕುವ ಹಾಗೆ ನೋಡಿಕೊಳ್ಳಬೇಕು. ಬಿಗಿಯಾದ ಆಡಳಿತ ನಡೆಸಬೇಕು, ಅಧಿಕಾರಿಗಳ ಪ್ರಭಾವಕ್ಕೊಳಗಾಗದೆ ಆಡಳಿತ ಚೆನ್ನಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಹೇಳಿ ಇದನ್ನು ಒತ್ತಾಯಪಡಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ವಿ. ಮರಿಯಪ್ಪ (ಹಿರಿಯೂರು).—ಮಾನ್ಯ ಸಭಾಪತಿಯವರೇ, ಮೈಸೂರು ರಾಜ್ಯದ ಜನಾರೋಗ್ಯ ಮತ್ತು ವೈದ್ಯಕೀಯ ಇಲಾಖೆಯ ಬೇಡಿಕೆಗಳ ಬಗ್ಗೆ ಸರಕಾರದವರು ಮಂಡಿಸಿರುವ ಬೇಡಿಕೆಯನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ ಮತ್ತು ಅದಕ್ಕೆ ಬೆಂಬಲವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ನಾನು ಒಂದೆರಡು ವಿಷಯಗಳನ್ನು ಪ್ರಸ್ತಾಪಮಾಡಬೇಕೆಂದು ಅಪೇಕ್ಷೆಪಡುತ್ತೇನೆ.

ಮೊದಲನೆಯದಾಗಿ ಜನಾರೋಗ್ಯ ಇಲಾಖೆಯ ವಿಷಯದಲ್ಲಿ ಕೆಲವಾರು ವರ್ಷಗಳಿಂದ ಆರೋಗ್ಯ ಮತ್ತು ವೈದ್ಯ ಇಲಾಖೆಯವರು ತೆಗೆದುಕೊಂಡಿರುವ ಕಾರ್ಯಕ್ರಮಗಳ ಪರಿಣಾಮವಾಗಿ ದೇಶದ ಜನತೆಯ ಆರೋಗ್ಯ ಸಾಧಾರಣವಾಗಿ ಉತ್ತಮಸ್ಥಿತಿಯಲ್ಲಿದೆ ಎಂಬುದನ್ನು ಜನಸಂಖ್ಯೆ ಹೆಚ್ಚಾದಹಾಗೆ ರಾಜ್ಯದಲ್ಲಿ ಬಹುಭಾಗದ ಪ್ರದೇಶಗಳಲ್ಲಿ ಹೆಚ್ಚು ರೋಗಗಳು, ಜಾಡ್ಯಗಳು ಮತ್ತು ಆ ಸಂಬಂಧವಾದ ಘಟನೆಗಳು ಸಂಭವಿಸದೆ ಜನರು ಆರೋಗ್ಯದಿಂದ, ನೆಮ್ಮದಿಯಿಂದ ಇರುವುದನ್ನು ಕಾಣುತ್ತಿದ್ದೇವೆ. ಹಾಗೇಯೆ ಹುಟ್ಟುವ ಮಕ್ಕಳಲ್ಲಿ ಸಾವಿಗೀಡಾಗುವ ಮಕ್ಕಳ ಸಂಖ್ಯೆ ಕಡಮೆಯಾಗುತ್ತಿರುವುದೂ, ಒಟ್ಟಿನಮೇಲೆ ದೇಶದಲ್ಲಿ ಜನರ ಆರೋಗ್ಯಸ್ಥಿತಿ ಉತ್ತಮವಾಗುತ್ತಿರುವುದೂ ಕಂಡುಬರುತ್ತಿದೆ. ಇದಕ್ಕಾಗಿ ಆರೋಗ್ಯ ಇಲಾಖೆಯ ಆಡಳಿತವನ್ನು ಪ್ರಶಂಸಮಾಡುವುದು ಅಗತ್ಯವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗೆಯೇ ವೈದ್ಯಕೀಯ ಮತ್ತು ಆರೋಗ್ಯ ಇಲಾಖೆಯ ಆಡಳಿತದಲ್ಲಿ ಕೆಲವು ಮಟ್ಟಿಗಿರುವ ಲೋಪದೋಷ ಅಥವಾ ಕೊರತೆಯೇನು ಇದೆ ಅದನ್ನು ನಿವಾರಣೆಮಾಡದಿದ್ದರೆ ಆಗುವ ಪರಿಣಾಮದ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತಾ ಆ ಬಗ್ಗೆ ಸರಕಾರದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ಈಗ ನಮ್ಮ ಮಿತ್ರರು ಹೇಳಿದಹಾಗೆ ಅನೇಕ ಕಡೆಗಳಲ್ಲಿ ಆಸ್ಪತ್ರೆಗಳನ್ನು ಪ್ರಾರಂಭಿಸಿದ್ದಾರೆ, ಅಲ್ಲಿ ಡಾಕ್ಟರುಗಳಿಲ್ಲ, ಅದರಿಂದ ತೊಂದರೆಯಾಗುತ್ತಿದೆ ಎಂಬುದನ್ನು ಹೇಳುತ್ತಾ ಆ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಆಸ್ಪತ್ರೆ ಕೊಟ್ಟಿರುವುದನ್ನು ತೆಗೆದುಬೇಕೆಂದು ಸಲಹೆ ಮಾಡಿರುವುದು ಅಷ್ಟು ಸೂಕ್ತವಲ್ಲ, ಪ್ರಗತಿದಾಯಕವಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಗತಿಮಾಡುವುದಕ್ಕೆ ನಾವು ಯಾವಾಗಲೂ ಬೇಕಾದ ಪರಿಹಾರವನ್ನು ಹುಡುಕಬೇಕೇ ಹೊರತು ಇರುವ ಆಸ್ಪತ್ರೆಗಳನ್ನು ಮುಚ್ಚಬೇಕೆಂದು ಹೇಳುವುದು ಸರಿಯಲ್ಲ. ಹೆಚ್ಚು ಆಸ್ಪತ್ರೆ ಬೇಕು, ಪ್ರೈಮರಿ ಹೆಲ್ತ್ ಸೆಂಟರುಗಳನ್ನು ಹೆಚ್ಚಾಗಿ ತೆರೆಯಬೇಕು ಎಂದು ಹೇಳುವಾಗ. 10 ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆ ಆಗಬೇಕೆಂದು ಹೇಳುವಾಗ ಆಸ್ಪತ್ರೆ ಪ್ರಾರಂಭಿಸುವುದೇ ಬೇಡ ಎಂದು ಹೇಳುವುದು ಸರಿಯಾದ ವಾದವಲ್ಲ. ಇದಕ್ಕೆ ಅಗತ್ಯವಾಗಿರುವ ಸೌಲಭ್ಯವನ್ನು ಒದಗಿಸಬೇಕು, ಬೇಕಾದ ಡಾಕ್ಟರುಗಳನ್ನು, ಸಿಬ್ಬಂದಿಯನ್ನು ಒದಗಿಸಲು ಪ್ರಯತ್ನಮಾಡಬೇಕು, ಹೆಚ್ಚು ಮೆಡಿಕಲ್ ಕಾಲೇಜುಗಳನ್ನು ಮತ್ತು ಆಯುರ್ವೇದಿಕ್ ಕಾಲೇಜುಗಳನ್ನು ತೆರೆದು ಹೆಚ್ಚು ಸಂಖ್ಯೆಯಲ್ಲಿ ಡಾಕ್ಟರುಗಳನ್ನು ತಯಾರಿಸಿ ಆಸ್ಪತ್ರೆಗಳಿಗೆ ಕಳುಹಿಸುವುದಕ್ಕೆ ವ್ಯವಸ್ಥೆಮಾಡಬೇಕು. ಡಿಗ್ರಿ ಮತ್ತು ಡಿಪ್ಲೊಮಾ ಪಡೆದ ಅನೇಕ ಡಾಕ್ಟರುಗಳಿದ್ದರೂ ಇವತ್ತು ಕೆಲವಾರು ಸಂದರ್ಭಗಳಲ್ಲಿ ರಕ್ರೂಟ್ಮೆಂಟ್ ಮಾಡುವ ಬಗ್ಗೆ ಇರುವ ಕೆಲವು ಷರತ್ತು; ನಿಯಮ ಬಹುಶಃ ಸಮರ್ಪಕವಾಗಿಲ್ಲ ಅಥವಾ ಅನೇಕ ತೊಂದರೆಗಳಿಂದಾಗಿ ಸಾಕಾದಷ್ಟು ರೆಕ್ರೂಟ್‌ಮೆಂಟ್ ಆಗುತ್ತಿಲ್ಲ ಎಂದು ತಿಳಿದುಬಂದಿದೆ. ಹಿಂದೆ ಅನೇಕ ಸಲ ಪ್ರಶ್ನೆಗಳಿಗೆ ಉತ್ತರ ಹೇಳುವಾಗ ನೂರಾರು ಜನರನ್ನು ಭರ್ತಿಮಾಡುವುದಕ್ಕೆ ಅವಕಾಶವಾಗಿಲ್ಲ, ರೆಕ್ರೂಟ್‌ಮೆಂಟ್ ರೂಲ್ಸ್ ಫೈನಲೈಜ್ ಆಗಿಲ್ಲ ಎಂದು ಹೇಳಿದ್ದರು. ಇದರಿಂದ ಅನೇಕ ಡಾಕ್ಟರುಗಳು ಕೆಲಸಕ್ಕೆ ಸೇರಲು ಅವಕಾಶವಾಗಿಲ್ಲ, ಸೇರಿರುವ ಅನೇಕರು ಟೆಂಪೊರರಿಯಾಗಿ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಅದು ಉತ್ಸಾಹದಾಯಕವಾಗಿಲ್ಲ ಎಂದು ಕಾಣುತ್ತದೆ. ಆದುದರಿಂದ ಇದನ್ನೆಲ್ಲಾ ಸರಿಪಡಿಸಿ ಹುದ್ದೆಗಳನ್ನು ಭರ್ತಿಮಾಡದಿದ್ದರೆ ಖಾಸಗಿಯಾಗಿ ಪ್ರಾಕ್ಟೀಸ್ ಮಾಡಲು ವೈದ್ಯಕೀಯ ಪದವೀಧರರಿಗೆ ಸಾಕಾದಷ್ಟು ಅವಕಾಶವಿದೆ. ಆದುದರಿಂದ ಸರಕಾರದಲ್ಲಿ

(ಶ್ರೀ ಪಿ. ವೆಂಕಟಗಿರಿಯಪ್ಪ)

ಕೆಲಸಮಾಡಿದರೂ ವರಮಾನ ಸಾಕಷ್ಟು ಬರುವಂತೆ ಪ್ರೈವೇಟ್ ಪ್ರಾಕ್ಟೀಸ್ ಮಾಡಿದವರಿಗೆ ಬರುವ ಹಾಗೆ ಸರಿಸಮವಾಗಿರುವಂತೆ ರೀಸನಬಲ್ ಲೆವಲ್‌ಗೆ ಡಾಕ್ಟರುಗಳ ಸಂಬಳಸಾರಿಗೆಯನ್ನು ತಂದು ಸಮರ್ಪಕವಾದ ಸಂಬಳ ಕೊಡುವ ವ್ಯವಸ್ಥೆ ಮಾಡದಿದ್ದರೆ ಡಾಕ್ಟರ ಹುದ್ದೆ ಅಟ್ರ್ಯಾಕ್ಟಿವ್ ಆಗುವುದಿಲ್ಲ ಎಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಕೂಡ ಈ ಬಗ್ಗೆ ಪರ್ಯಾಲೋಚಿಸಿದ್ದಾರೆಂದು ತಿಳಿದಿದ್ದೇನೆ, ಅನೇಕ ಸಂದರ್ಭಗಳಲ್ಲಿ ಅವರು ಸಂಬಳದ ಸ್ಕೇಲನ್ನು ಉತ್ತಮಪಡಿಸಲು ಯೋಚನೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಅದನ್ನು ಜಾಗ್ರತೆಯಾಗಿ ಮಾಡಿದರೆ ಈ ಸಮಸ್ಯೆ ನಿವಾರಣೆಯಾಗಬಹುದು. ಮತ್ತು ಕಂಡೆನ್ಸ್‌ಡ್ ಎಂ. ಬಿ. ಬಿ. ಎಸ್. ಕೋರ್ಸ್‌ನ್ನು ಮುಗಿಸಿ ಸುಮಾರು 50 ಜನರು ಎಲ್. ಎಂ ಪಿ. ಮಾಡಿದ್ದವರು ಪದವೀಧರರಾಗಿದ್ದಾರೆ, ಸುಮಾರು 3 ಬ್ಯಾಚುಗಳಲ್ಲಿ ಹೀಗೆ ಡಿಗ್ರಿ ಪಡೆದವರಿದ್ದಾರೆ. ಕೆಲವರಿಗೆ ಮೂರನೆಯ ಗ್ರೇಡಿನಿಂದ ಎರಡನೆಯ ಗ್ರೇಡಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಆದರೆ ಹೊಸದಾಗಿ ನಾನು ಹೇಳಿದ ಎಂ. ಬಿ. ಬಿ ಎಸ್. ಆದ 50 ಜನರ ವಿಚಾರದಲ್ಲಿ ಸರಿಯಾದ ಕ್ರಮ ಕೈಕೊಂಡಿಲ್ಲ. ಆದುದರಿಂದ ಈ ಒಂದು ಸಮಸ್ಯೆಯನ್ನು ಜಾಗ್ರತೆಯಾಗಿ ಬಿಡಿಸಿ ಅವರಿಗೆ ಪ್ರಮೋಷನ್ ಕೊಡುವುದನ್ನು ಯೋಚನೆಮಾಡಬೇಕೆಂದು ಹೇಳುತ್ತೇನೆ. ಸರಕಾರಿ ಹುಕುಂ ಪ್ರಕಾರ ಸೇಕಡ 50 ಹುದ್ದೆಗಳನ್ನು ಪ್ರಮೋಷನ್ ವೇಕೆನ್ಸಿಗಳಾಗಿ ಕಾದಿರಿಸಬೇಕಾಗಿದೆ. ಎರಡನೆ ಗ್ರೇಡಿನ ಶೇಕಡ 50 ಹುದ್ದೆಗಳನ್ನು ಭರ್ತಿಮಾಡಬೇಕೆಂದಿದ್ದರೂ ಅದನ್ನು ಭರ್ತಿ ಮಾಡುವುದಕ್ಕಾಗಿಲ್ಲ. ಹಿಂದೆ ತಾಲ್ಲೂಕು ಮಟ್ಟದಲ್ಲಿ ಪ್ರಜಾಸಂಖ್ಯೆ 3 ಸಾವಿರ ಇದ್ದುದು ಈ ದಿವಸ 15 ಸಾವಿರವಾಗಿದೆ.

ಅನೇಕ ತಾಲ್ಲೂಕು ಮುಖ್ಯಸ್ಥಳಗಳಲ್ಲಿ ಮೊದಲು ನಾಲ್ಕೈದು ಸಾವಿರ ಜನಸಂಖ್ಯೆ ಇದ್ದರೆ ಈಗ 15—20 ಸಾವಿರ ಪ್ರಜಾ ಸಂಖ್ಯೆಗೆ ಏರಿದೆ. ಇದು ಏನನ್ನು ತೋರಿಸುತ್ತದೆ ಎಂದರೆ, ಸಾಧಾರಣವಾಗಿ ಪಟ್ಟಣದ ಮತ್ತು ಸುತ್ತ ಮುತ್ತಲ ಹಳ್ಳಿಗಳ ಜನರೂ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಿಗೆ ಬರುವುದರಿಂದ ಅಲ್ಲಿ ರೋಗಿಗಳ ಸಂಖ್ಯೆಯೂ ಜಾಸ್ತಿಯಾಗಿದೆ. ಹೆಚ್ಚು ಜನ ರೋಗಿಗಳಿಗೆ ಚಿಕಿತ್ಸೆ ನೀಡುವ ಆಸ್ಪತ್ರೆಯಾಗುತ್ತಿರುವುದರಿಂದ ತಾಲ್ಲೂಕು ಮುಖ್ಯ ಸ್ಥಳಗಳಲ್ಲಿರುವ ಆಸ್ಪತ್ರೆಗಳಲಿ ಇರುವ ಮೂರನೆ ದರ್ಜೆಯ ವೈದ್ಯರ ಹುದ್ದೆಗಳನ್ನು ಎರಡನೆ ದರ್ಜೆಗೆ ಬದಲಾಯಿಸಿದರೆ ಅಲ್ಲಿಗೆ ಎರಡನೆ ದರ್ಜೆ ಡಾಕ್ಟರುಗಳನ್ನು ಹಾಕುವುದಕ್ಕೆ ಅವಕಾಶವಿರುತ್ತದೆ. ಈ ಒಂದು ಸನ್ನಿವೇಶ ಇರುವುದರಿಂದ ಎಲ್. ಎಂ. ಪಿ. ಪಾಸಾಗಿರುವ 50 ಜನ ಕಂಡೆನ್ಸ್ಡ್ ಎಂ. ಬಿ. ಬಿ. ಎಸ್. ಕೋರ್ಸ್ ಮುಗಿಸಿ ಪದವೀಧರರಾಗಿದ್ದು ಅವರು ಕೆಲಸ ಮಾಡುತ್ತಿರುವ ಕಡೆಗಳಲ್ಲಿಯೆ ಮೂರನೆ ದರ್ಜೆ ಹುದ್ದೆಯನ್ನು ಎರಡನೆ ದರ್ಜೆಗೆ ಏರಿಸಿ ಅವರಿಗೆಲ್ಲ ಎರಡನೆ ದರ್ಜೆ ಹುದ್ದೆಯನ್ನು ಕೊಡಬಹುದು ಅಥವಾ ಎರಡನೆ ದರ್ಜೆ ಹುದ್ದೆಗಳನ್ನು ಎಲ್ಲೆಲ್ಲಿ ಮಾಡುವುದಕ್ಕಾಗುತ್ತದೆಯೋ ಅಲ್ಲಿ ಅವರನ್ನೆಲ್ಲ ನೇಮಿಸಬಹುದು. ಈ ರೀತಿಯ ವ್ಯವಸ್ಥೆ ಮಾಡಿದರೆ ಅವರ ಮೊರೆಲ್ ಉತ್ತಮವಾಗುತ್ತದೆ ಎಂದು ಸಂದರ್ಭದಲ್ಲಿ ಹೇಳುತ್ತೇನೆ.

(SRI B. V. MAGAVI in the Chair)

3-00 P. M.

ಆಯುರ್ವೇದದ ಬಗ್ಗೆ ಸರ್ಕಾರ ತಾಳಿರುವ ಧೋರಣೆ ಬಗ್ಗೆ ನಾನು ಸ್ವಲ್ಪ ಪ್ರಸ್ತಾಪ ಮಾಡಲು ಇಷ್ಟಪಡುತ್ತೇನೆ. ಆಯುರ್ವೇದ ಔಷಧಿಗಳು ಬಹಳ ಪರಿಣಾಮಕಾರಿಯಾದ ರಕ್ಷಣೆ ಕೊಡತಕ್ಕ ಶಕ್ತಿ, ಸಾಮರ್ಥ್ಯ ಸೌಲಭ್ಯವನ್ನು ಹೊಂದಿದೆ. ಆಯುರ್ವೇದ ಔಷಧಿ ಮತ್ತು ಗಿಡ ಮೂಲಿಕೆಗಳು ಬಹಳ ಪರಿಣಾಮವನ್ನುಂಟುಮಾಡುತ್ತಿವೆ. ಆದರೆ ದುರದೃಷ್ಟವಶಾತ್ ಸರಿಯಾದ ರೀತಿಯಲ್ಲಿ ಸಂಶೋಧನೆ ನಡೆಯದೆ ಅದಕ್ಕೆ ಬೇಕಾಗಿರತಕ್ಕ ಗಿಡಮೂಲಿಕೆಗಳು ದೇಶದಲ್ಲಿ ಸಿಕ್ಕತಕ್ಕ ವ್ಯವಸ್ಥೆ ಮಾಡದೆ ಇರುವುದರಿಂದ ಆ ಒಂದು ವಿಜ್ಞಾನ ನಿರುಪಯೋಗವಾಗಿ ಸಾಕಷ್ಟು ಪ್ರಯೋಜನ ಅದರಿಂದ ಜನತೆಗೆ ಸಿಕ್ಕದಂಥ ಪರಿಸ್ಥಿತಿ ಇದೆ. ಇಡೀ ಇಂಡಿಯಾ ದೇಶದಲ್ಲಿ ಈ ಪದ್ಧತಿಯನ್ನು ಉತ್ತಮಪಡಿಸಲು ಪ್ರಯತ್ನಗಳು ನಡೆಯುತ್ತಿವೆ ಇತ್ಯಾದಿಯಾಗಿ ಪತ್ರಿಕೆಗಳಲ್ಲಿ ಓದಿದ್ದೆ. ಇವತ್ತಿನ ವರೆಗೂ ಯಾವುದೇ ರೀತಿಯಿಂದ ಆಗಿರತಕ್ಕ ವ್ಯವಸ್ಥೆ ಸಮರ್ಪಕವಾಗಿ ಆಗಿಲ್ಲ. ಆಯುರ್ವೇದಕ್ಕೆ ಸಾಕಷ್ಟು ಪ್ರಾಶಸ್ತ್ಯ ಬರಬೇಕಾದರೆ ಸರ್ಕಾರದವರು ಆಯುರ್ವೇದ ಮತ್ತು ಅಲೋಪತಿ ಎರಡು ಪದ್ಧತಿಗಳನ್ನೂ ಉಪಯೋಗಿಸುವುದಕ್ಕೆ ಒಂದೇ ಆಸ್ಪತ್ರೆಯಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕು. ನಾನು ಕೆಲವು ದಿನಗಳ ಹಿಂದೆ ಮೆಂಟಲ್ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಆಯುರ್ವೇದ ಮತ್ತು

ಅಲೋಪತಿ ಎರಡೂ ಪದ್ಧತಿಗಳ ಪ್ರಕಾರ ರೋಗಿಗಳಿಗೆ ಚಿಕಿತ್ಸೆಯನ್ನು ಮಾಡುವ ವ್ಯವಸ್ಥೆಯನ್ನು ಒಂದೆರಡು ವರ್ಷಗಳಿಂದ ಪ್ರಾಯೋಗಿಕವಾಗಿ ನಡೆಸುತ್ತಿದ್ದಾರೆ. ಅದೇ ರೀತಿಯಲ್ಲಿ ಜಿಲ್ಲಾ ಮಟ್ಟದಲ್ಲಿಯೂ ಎಲ್ಲ ಆಸ್ಪತ್ರೆಗಳಲ್ಲಿಯೂ ಒಬ್ಬ ಆಯುರ್ವೇದ ಡಾಕ್ಟರನ್ನು ನೇಮಿಸಿ ರೋಗಿಗಳ ರೋಗವನ್ನು ಕಂಡು ಹಿಡಿಯತಕ್ಕ ಕೆಲಸವನ್ನು ಅಲೋಪತಿ ಡಾಕ್ಟರು ಮಾಡಿ, ಸುಲಭ ಚಿಕಿತ್ಸೆ ಮಾಡತಕ್ಕ ಔಷಧಿಗಳು ಆಯುರ್ವೇದದಲ್ಲಿರುವುದರಿಂದ ಮೊದಲು ಆಯುರ್ವೇದ ಚಿಕಿತ್ಸೆಯನ್ನು ನಡೆಸಿ ಅದರ ಮೇಲೆ ಆವಶ್ಯಕತೆ ಬಿದ್ದರೆ, ಅನಿವಾರ್ಯವಾದರೆ ಅಲೋಪತಿ ಔಷಧಿಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಿದರೆ ಸಾಕಷ್ಟು ಆಯುರ್ವೇದಕ್ಕೆ ಪ್ರಾಶಸ್ತ್ಯ ಬರುತ್ತದೆ ಎಂದು ನಾನು ಭಾವಿಸುತ್ತೇನೆ.

ಔಷಧಿಗಳನ್ನು ತಯಾರು ಮಾಡತಕ್ಕ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಸಂಜೀವನಾಥ ಐಕಳ ಅವರು ಹೇಳಿದರು. ಆಯುರ್ವೇದ ಔಷಧಿಗಳನ್ನು ಉತ್ಪಾದನೆ ಮಾಡುವುದಕ್ಕೆ ಒಂದು ಕೇಂದ್ರವನ್ನು ಸ್ಥಾಪನೆ ಮಾಡುವುದು ಆವಶ್ಯಕ. ಅದಕ್ಕೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಹರ್ಬೇರಿಯಂ. ಇದನ್ನು ಸರ್ಕಾರ ತೀವ್ರವಾಗಿ ಗಮನಿಸಬೇಕು. ಮೈಸೂರು ದೇಶದಲ್ಲಿ ಆಯುರ್ವೇದ ಉಳಿಯಬೇಕು ಎನ್ನುವುದಾದರೆ ನೂರು ಎಕರೆಯಲ್ಲ, ಸರಿಯಾಗಿರತಕ್ಕ 500-600 ಎಕರೆ ಪ್ರದೇಶವನ್ನು ಆರಿಸಿಕೊಂಡು ಅಲ್ಲಿ ಮೂಲಿಕೆಗಳನ್ನು ಅದರಲ್ಲಿಯೂ ಅಪರೂಪವಾದ ಮೂಲಿಕೆಗಳನ್ನು ತಂದು ವಿಶೇಷವಾಗಿ ಬೆಳೆಸಿ ಒಂದು ಫಾರ್ಮಸಿಯನ್ನು ಸ್ಥಾಪನೆ ಮಾಡಿ ಖಂಡಿತವಾಗಿಯೂ ದೇಶದಲ್ಲಿ ಆಯುರ್ವೇದದ ಬಹಳ ಉಪಯುಕ್ತವಾದ ಸೇವೆಯನ್ನು ರೋಗಿಗಳಿಗೆ ಒದಗಿಸಿಕೊಟ್ಟು ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ ಸ್ವಾಮಿ.

ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಕಾರಣ ಅಲ್ಲಿ ರೋಗಿಗಳ ಸಂಖ್ಯೆ ಜಾಸ್ತಿ. ರಾಜ್ಯದ 19 ಜಿಲ್ಲೆಗಳಿಂದಲೂ ಕೂಡ ಮುಖ್ಯವಾಗಿರತಕ್ಕ ರೋಗಿಗಳೆಲ್ಲರೂ ಬೆಂಗಳೂರಿಗೇ ಬರಬೇಕು. ಇದಕ್ಕೆ ಕಾರಣ ಬೆಂಗಳೂರಿನಲ್ಲಿ ಬೇಕಾಗಿರತಕ್ಕ ಸಲಕರಣೆಗಳು ಮತ್ತು ಸ್ಪೆಷಲಿಸ್ಟ್ ಸಿಕ್ಕುತ್ತಾರೆ ಎನ್ನುವುದು. ಈ ಆಸೆಯಿಂದ ಬರುತ್ತಾರೆ. ಇದೇ ತರಹ ವ್ಯವಸ್ಥೆಯನ್ನು ಜಿಲ್ಲಾ ಮಟ್ಟದಲ್ಲಿಯೂ ಮಾಡಿ ಅಲ್ಲಿಗೂ ಸ್ಪೆಷಲಿಸ್ಟ್ಸ ಒದಗಿಸುವ ವ್ಯವಸ್ಥೆಯನ್ನು ಮಾಡಿದರೆ ಬೆಂಗಳೂರಿನಲ್ಲಿರುವ ಆಸ್ಪತ್ರೆಗಳಿಗೆ ರೋಗಿಗಳು ಬರತಕ್ಕ ಆವಶ್ಯಕತೆ ಕಡಮೆ ಆಗುತ್ತದೆ. ಮತ್ತು ಹೀಗೆ ಬರುವವರಿಗೆ ನೂರಾರು, ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡುವ ತೊಂದರೆಯೂ ತಪ್ಪುತ್ತದೆ. ಇದರ ಜೊತೆಗೆ ಆಸ್ಪತ್ರೆಗಳಲ್ಲಿ ಸ್ಥಳದ ಕೊರತೆಯೂ ಕಡಮೆಯಾಗುತ್ತದೆ. ಈಗ ಬೆಂಗಳೂರಿನಲ್ಲಿರುವ ಆಸ್ಪತ್ರೆಗಳನ್ನು ವಿಸ್ತರಣೆ ಮಾಡಲು ಖರ್ಚಾಗುವ ಹಣವನ್ನು ಜಿಲ್ಲಾ ಆಸ್ಪತ್ರೆಗಳಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿ, ಅಲ್ಲಿ ಬೇಕಾದ ಸ್ಥಳಾವಕಾಶವನ್ನು ಮಾಡುವುದಕ್ಕೂ ಮತ್ತು ಇತರ ಅಭಿವೃದ್ಧಿ ಕೆಲಸಗಳಿಗೂ ಉಪಯೋಗಿಸಬಹುದು. ಜಿಲ್ಲಾ ಮಟ್ಟದಲ್ಲಿ ಸ್ಪೆಷಲಿಸ್ಟ್ ಡಾಕ್ಟರುಗಳ ಆವಶ್ಯಕತೆ ಬಹಳವಾಗಿದೆ ? ಅವರನ್ನು ಅಲ್ಲಿಗೆ ಕಳುಹಿಸಿ ಕೊಡುವ ವ್ಯವಸ್ಥೆಯನ್ನು ಮಾಡಿದರೆ ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗಳು ಈಗ ಏನು ಸೇವೆಯನ್ನು ಸಲ್ಲಿಸುತ್ತಿವೆ ಅದಕ್ಕಿಂತಲೂ ಹೆಚ್ಚಿನ ಸೇವೆಯನ್ನು ಪರಿಣಾಮಕಾರಿಯಾಗಿ ಜನತೆಗೆ ಸುಲಭ ದರದಲ್ಲಿ ಒದಗಿಸಬಹುದು ಎಂದು ಹೇಳಿ ಸರ್ಕಾರ ಈ ಬಗ್ಗೆ ತೀವ್ರ ಗಮನವನ್ನು ಹರಿಸಬೇಕು ಎಂದು ತಿಳಿಸಿ ಈ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಜನಾರೋಗ್ಯ, ಮತ್ತು ವೈದ್ಯಕೀಯ ಈ ಎರಡು ಖಾತೆಗಳ ಮೇಲೆ ಸರ್ಕಾರ 31-3-1965ರ ಹೊತ್ತಿಗೆ ಹತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ಎಂಟೂವರೆ ಕೋಟಿ ರೂಪಾಯಿಗಳನ್ನು ಆಯವ್ಯಯ ಪಟ್ಟಿಯಲ್ಲಿ ತೋರಿಸಿದ್ದಾರೆ. ಈ ಹಣವನ್ನು ಖರ್ಚು ಮಾಡುವಾಗ ಎಷ್ಟರಮಟ್ಟಿಗೆ ಜನತೆಗೆ ಆರೋಗ್ಯ ಮತ್ತು ವೈದ್ಯಕೀಯ ಸೌಕರ್ಯವನ್ನು ಕೊಡುತ್ತಾರೆ ಎನ್ನುವುದನ್ನು ವಿಮರ್ಶೆ ಮಾಡಿ ನೋಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಕೇಳುತ್ತಿದ್ದೇನೆ.

ಪ್ರತಿವರ್ಷ ವೈದ್ಯಕೀಯ ಮತ್ತು ಜನಾರೋಗ್ಯ ಖಾತೆಗಳು ಬೆಳೆಯುತ್ತಿವೆ. ವಿದ್ಯಾ ಖಾತೆಯು ಎಷ್ಟು ಬೆಳೆಯುತ್ತಿದೆಯೋ ಹಾಗೆ ಈ ವೈದ್ಯಕೀಯ ಖಾತೆಯೂ ಬೆಳೆಯುತ್ತಿದೆ. ಸರ್ಕಾರ ಈ ಇಲಾಖೆಗಳಿಗೆ ಒದಗಿಸುತ್ತಿರುವ ಹಣ ಎಷ್ಟರಮಟ್ಟಿಗೆ ವಿನಿಯೋಗವಾಗುತ್ತಿದೆ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನಗಳಿಗೆ ಎಷ್ಟರಮಟ್ಟಿಗೆ ವೈದ್ಯಕೀಯ ಸೌಲಭ್ಯ ದೊರೆಯುತ್ತಿದೆ ಎಂದು ನಾನು ಇವತ್ತಿನ ದಿವಸ ಸರ್ಕಾರವನ್ನು ಕೇಳುತ್ತಿದ್ದೇನೆ. ಅನೇಕ ಆಸ್ಪತ್ರೆಗಳನ್ನು ತೆರೆದಿದ್ದಾರೆ ಆದರೆ ಅಲ್ಲಿ ಡಾಕ್ಟರುಗಳಿಲ್ಲ, ನರ್ಸ್‌ಗಳಿಲ್ಲ, ಸೂಲಗಿತ್ತಿಯರಿಲ್ಲ. ಒಂದು ಊರಿಗೆ ಒಂದು ಆಸ್ಪತ್ರೆಯನ್ನು ತೆರೆಯಲೇಬೇಕು; ಎಂದು ಪ್ರಯತ್ನ ಮಾಡುತ್ತೀರಿ. ಈ ವರ್ಷ ಎಷ್ಟು ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲದೆ ಇದ್ದಾರೆ, ಎಷ್ಟು ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ, ಎಷ್ಟು ಕಡೆ ಕಾಂಪೌಂಡರುಗಳಿಲ್ಲ ಎನ್ನುವುದನ್ನು ತಿಳಿಸುತ್ತೀರಾ ? ಯಾವುದು ಹೇಗಾದರೂ ಇರಲಿ ಅಂಕಿ ಅಂಶಗಳನ್ನು ಕೇಂದ್ರ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸರ್ಕಾರಕ್ಕೆ ಕೊಡುತ್ತೀರಿ. ಮೈಸೂರು ಸಂಸ್ಥಾನದಲ್ಲಿ 1964-65ನೆ ಸಾಲಿನಲ್ಲಿ 390 ಆಸ್ಪತ್ರೆಗಳನ್ನು ತೆಗೆದೆವು ಎಂದು ತಿಳಿಸುತ್ತೀರಿ. ಆದರೆ ಇದರಲ್ಲಿ ಒಂದು ಕಡೆಯೂ ಡಾಕ್ಟರುಗಳಿಲ್ಲ. ಇದು ನಮ್ಮ ರಾಜ್ಯದಲ್ಲಿರತಕ್ಕ ವೈದ್ಯಕೀಯ ಮತ್ತು ಜನಾರೋಗ್ಯ ಖಾತೆಯ ವೈಶಿಷ್ಟ್ಯ. ಈ ಖಾತೆಗಳು ನಮ್ಮ ರಾಜ್ಯದಲ್ಲಿ ಕಳೆದ ಎಂಟು ವರ್ಷಗಳಿಂದಲೂ ಪರಿಣತರಾದ ವೈದ್ಯರ ಕೈಯಲ್ಲಿದೆ. ವೈದ್ಯಕೀಯದಲ್ಲಿ ಅನುಭವವಿಲ್ಲದೆ ಇರುವವರ ಕೈಯಲ್ಲಿದ್ದರೆ ಸ್ವಲ್ಪ ತಲೆಕೆಳಕಾಗುತ್ತಿತ್ತೋ ಏನೋ, ಅವರು ಡಾಕ್ಟರುಗಳು ಹೇಳತಕ್ಕ ಅಭಿಪ್ರಾಯದಂತೆ ತಪ್ಪು ಮಾಡುತ್ತಿದ್ದರೋ ಏನೋ. ಆದರೆ ಈ ಎರಡು ಖಾತೆಗಳೂ ವೈದ್ಯ ವೃತ್ತಿಯಲ್ಲಿ ಶಿಕ್ಷಣ ಪಡೆದು ಅನುಭವ ಇರುವವರ ಕೈಯಲ್ಲಿ ಇದೆ. ಇವರು ಜನಗಳ ಆರೋಗ್ಯಕ್ಕೆ ಮತ್ತು ವೈದ್ಯಕೀಯ ಸೌಕರ್ಯಕ್ಕೆ ಸಂಬಂಧಪಟ್ಟಂತೆ ಹೆಚ್ಚು ಅನುಕೂಲಗಳನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ.

ವೈದ್ಯಕೀಯ ಮತ್ತು ಜನಾರೋಗ್ಯ ಖಾತೆಗಳನ್ನು ಸೇರಿಸಿ ಒಂದೇ ಖಾತೆ ಮಾಡುತ್ತೇವೆ, ಈ ಎರಡೂ ಖಾತೆಗಳೂ ಒಂದೇ ಡೈರೆಕ್ಟೊರೇಟ್ ಆಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಮೂರು ವರ್ಷದಿಂದ ಹೇಳುತ್ತಿದ್ದಾರೆ. ಇವತ್ತು, ನಾಳೆ, ಶಿವರಾತ್ರಿ, ಉಗಾದಿ, ದಸರಾ ಹಬ್ಬ ಎಂದು ಮುಂದು ಮುಂದಕ್ಕೆ ಹೋಗುತ್ತಿದೆ ಈ ಕೆಲಸ. ಇವೆರಡನ್ನೂ ಒಂದು ಮಾಡಲು ಸರ್ಕಾರಕ್ಕೆ ಇರುವ ಗಂಡಾಂತರವೇನು ಎಂದು ಕೇಳುತ್ತೇನೆ. ಈ ಎರಡು ಅಂಗಗಳಿಗೂ ಸಾಮರಸ್ಯವಿಲ್ಲ. ಜನಾರೋಗ್ಯ ಮತ್ತು ವೈದ್ಯಕೀಯ ಖಾತೆಗಳು ಮುಖ್ಯವಾದ ಖಾತೆಗಳು. ಇವು ಜನಾರೋಗ್ಯವನ್ನು ಕಾಪಾಡುವುದರಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ, ಒಗ್ಗಟ್ಟಾಗಿ ನಡೆಯುತ್ತಿವೆಯೇ ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಇವೆರಡು ಇಲಾಖೆಗಳಲ್ಲೂ ಕೋ ಆರ್ಡಿನೇಷನ್ ಇಲ್ಲದೆ ಇರುವುದರಿಂದ ರಾಜ್ಯದಲ್ಲಿ ಇಷ್ಟೊಂದು ಪ್ರಬಲವಾದ ಚರ್ಚೆ ಆಗುವುದಕ್ಕೆ ಕಾರಣರಾಗಿದ್ದಾರೆ ಮತ್ತು ಟೀಕೆಗಳಿಗೆ ಗುರಿಯಾಗಿದ್ದಾರೆ ಎಂದು ನಾನು ಸರ್ಕಾರಕ್ಕೆ ಹೇಳದೆ ವಿಧಿ ಇಲ್ಲ. ಇನ್ನೂ ಮುಂದೆ ಹೇಳುತ್ತಾ ಹೋದರೆ ಮಂತ್ರಿಮಂಡಲದಲ್ಲಿ ಜನಾರೋಗ್ಯ ಮತ್ತು ವೈದ್ಯಕೀಯ ಇಲಾಖೆಗಳನ್ನು ಅಮಲ್ಗಮೇಟ್ ಮಾಡಬೇಕೋ ಬೇಡವೋ ಎಂಬ ಜಿಜ್ಞಾಸೆ ಕೆಲವು ಮಂತ್ರಿಗಳಲ್ಲಿ ಬಂದಿರಬೇಕು ನಾನು ಹೇಳುವುದಿಷ್ಟೆ. ಅವೆರಡೂ ಒಂದಾಗ ಬೇಕೆಂಬುದೇ ನನ್ನ ಇಷ್ಟ. ಸರ್ಕಾರದವರು ಈ ಸಭೆಗೆ ಕೊಡತಕ್ಕ ಆಶ್ವಾಸನೆಯನ್ನು ಎಂದಿಗೆ ಈಡೇರಿಸುತ್ತಾರೋ ಗೊತ್ತಿಲ್ಲ. ಇಲ್ಲಿ ಹೇಳಿದಂತಹ ಮಾತುಗಳನ್ನು ಇದುವರೆಗೆ ಕಾರ್ಯ ರೂಪಕ್ಕೆ ತರದೇ ಇರುವುದನ್ನು ನೋಡಿದರೆ ನನಗೇನೂ ತಿಳಿಯದೇ ಇರತಕ್ಕದ್ದು ಮತ್ತು ಅರ್ಥವಾಗದೇ ಇರತಕ್ಕದ್ದಾಗಿದೆ. ಇದೊಂದು ಜಟಿಲ ಸಮಸ್ಯೆಯಾಗಿ ಹೋಗಿದೆ. ಇದರ ಕಥೆ ತೆಗೆದುನೋಡಿದರೆ ಬಹಳ ಆನಂದವಾಗುತ್ತದೆ. ನಮ್ಮ ಜನಗಳು ಎಷ್ಟರಮಟ್ಟಿಗೆ ಆರೋಗ್ಯವಾಗಿದ್ದಾರೆಂಬುದು ಗೊತ್ತಾಗುತ್ತದೆ. ನಮ್ಮ ತಾಲ್ಲೂಕಿಗೆ ಡಾ|| ನಾಗಪ್ಪ ಆಳ್ವಾ ಅವರು ಬಂದಾಗ ಒಂದು ಆಸ್ಪತ್ರೆಯನ್ನು ತೆರೆದರು. ಅಲ್ಲಿ ಇದುವರೆಗೂ ಒಬ್ಬ ಡಾಕ್ಟರು ಇಲ್ಲ. ಕಾಂಪೌಂಡರ್ ಹತ್ತಿರ 6 ತಿಂಗಳು ಕೆಳಗೆ ಬಂದಂಥ ಕೇವಲ 6 ಸೀಸೆಗಳಿದ್ದುವು. ಮತ್ತೊಂದು ಐದು ಮೈಲಿಗಳ ದೂರದಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿದರು. ಅಲ್ಲಿಗೆ ನಾಲ್ಕೈದು ಮೈಲಿಗಳ ದೂರ ಜನಗಳು ನಡೆದು ಹೋಗುತ್ತಿದ್ದರು. ಈ ಆಸ್ಪತ್ರೆಗೆ ಹಾಕಿರತಕ್ಕ ಡಾಕ್ಟರು ಮತ್ತು ಕಾಂಪೌಂಡರುಗಳು ಸಹ ಸರಿಯಾಗಿಲ್ಲ. ಖರ್ಚು ವೆಚ್ಚಗಳನ್ನು ಈ ಆಸ್ಪತ್ರೆಗೆ ಸರಿಯಾಗಿ ಕೊಟ್ಟು ಒಳ್ಳೆಯ ವ್ಯವಸ್ಥೆ ಮಾಡದೇ ಹೋದರೆ ಜನತೆಗೆ ಸಾಕಷ್ಟು ಸೌಕರ್ಯ ದೊರೆಯುವಂತಿಲ್ಲ. ಕಾನೂನು ಮಂತ್ರಿಗಳಿಗೂ ಈ ವಿಷಯ ಗೊತ್ತಿದೆ. ಆದರೆ ಅವರು ರಾಜಕೀಯ ಒತ್ತಡಕ್ಕೆ ಸಿಕ್ಕಿ ಹಾಕಿಕೊಂಡಿರುವುದರಿಂದ ಈ ಆಸ್ಪತ್ರೆ ಅಲ್ಲಿಗೆ ಕೊಡದೇ ಹೋದರೆ ಕಾಂಗ್ರೆಸ್ ವಿರೋಧವಾಗುತ್ತದೆಂದು ತುಮಕೂರು ಜಿಲ್ಲೆಯೊಳಗೆ ಕಾನೂನು ಮಂತ್ರಿಗಳ ಹೆಸರು ಇಲ್ಲದಂತಾದೀತೆಂದು ದೊಡ್ಡ ಅಗ್ರಹಾರವೆಂಬ ಸ್ಥಳದಲ್ಲಿ ಒಂದು ಆಸ್ಪತ್ರೆಯನ್ನು ತೆರೆದಿದ್ದಾರೆ. ಇದನ್ನು ಯಾರೋ ಒಬ್ಬರ ಒತ್ತಡಕ್ಕೋಸ್ಕರ ತೆರೆದಿದ್ದಾರಷ್ಟೆ. ಆದರೆ ಎಲ್ಲಿ ತೆಗೆಯಬೇಕೋ ಅಲ್ಲಿ ತೆಗೆಯುವುದಿಲ್ಲ, ಎಲ್ಲಿ ಬೇಡವೋ ಅಲ್ಲಿ ಆಸ್ಪತ್ರೆಗಳನ್ನು ತೆರೆಯುತ್ತಾರೆ. ಏಕೆ ಈ ರೀತಿ ಹೇಳುತ್ತಿದ್ದೇನೆಂದರೆ, ಜನತೆಯ ಹಣವನ್ನು ಜನತೆಯ ಸೌಕರ್ಯಕ್ಕೋಸ್ಕರ ಚೆಲ್ಲುವಾಗ ಸರ್ಕಾರದವರು ಸ್ವಲ್ಪ ಬಿಗಿಬಿಗಿಯಾಗಿರಬೇಕು ಆರೋಗ್ಯ ಖಾತೆ ಮತ್ತು ವೈದ್ಯಕೀಯ ಖಾತೆಗಳ ಆಡಳಿತ ಸಡಿಲವಾಗಿರಬಾರದು. ಅವುಗಳ ಬಗ್ಗೆ ಬಿಕ್ಕಟ್ಟಾದ ಆಡಳಿತವಿರಬೇಕು. ಇವರು ಏನು ಮನಸ್ಸಿನಲ್ಲಿ ಅಂದುಕೊಂಡಿದ್ದಾರೋ ಅದನ್ನು ಈಡೇರಿಸುವುದಕ್ಕೆ ಪ್ರಯತ್ನಮಾಡಬೇಕು. ಈ ಸರ್ಕಾರದಲ್ಲಿ ಈ ಎರಡು ಇಲಾಖೆಗಳ ಬಗ್ಗೆ ದ್ವಂದ್ವಯುದ್ಧ ಇದ್ದೇ ಇದೆ. ಒಂದು ನೀತಿ, ಒಂದು ಕಟ್ಟು ಪಾಡು ಇಲ್ಲ. ಡಾಕ್ಟರುಗಳಾಗಿ ಹೋಗುವವರಿಗೆ

ಎಲ್. ಎಂ. ಪಿ. ಯಾದರೂ ಆಗಿರಬೇಕು. ಡಾಕ್ಟರುಗಳ ಅಭಾವವನ್ನು ನೀಗಿಸಬೇಕು. ಗುಲ್ಬರ್ಗಾ ಬೆಳಗಾಂ-ಬೆಂಗಳೂರುಗಳಲ್ಲಿ ಬೇಕಾದಷ್ಟು ಆಸ್ಪತ್ರೆಗಳನ್ನು ತೆರೆದಿದ್ದಾರೆ. ಆದರೂ ಡಾಕ್ಟರುಗಳು ಇತ್ತೀಚೆಗೆ ಬೇಕಾದಷ್ಟು ನೇಮಕವಾದರೂ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇಲ್ಲವೆಂಬ ಕೂಗು ಕೇಳಿ ಬರುತ್ತಲೇ ಇದೆ. ಈ ವಿಚಾರದಲ್ಲಿ ಅತಿ ಕಟುವಾಗಿ ಭಾಷಣಗಳಲ್ಲಿ ನಾವು ಪ್ರತಿಸಾರಿಯೂ ಟೀಕೆಗಳನ್ನು ಮಾಡುತ್ತಾ ಇದ್ದರೂ ಇವರಿಗೆ ಇನ್ನೂ ಮನಸ್ಸು ಬರಲಿಲ್ಲ. ಇಲ್ಲವೇ ಮೆಡಿಕಲ್ ಸ್ಕೂಲುಗಳನ್ನು ರಿವೈವ್ ಮಾಡಿ, ಆ ರೀತಿಯಾಗದಿದ್ದರೆ ಹೆಚ್ಚಿಗೆ ಡಾಕ್ಟರುಗಳನ್ನು ಎಲ್ಲಾ ಆಸ್ಪತ್ರೆಗಳಲ್ಲೂ ತುಂಬಿ. ಇಲ್ಲದೇ ಹೋದರೆ ಮುಂದೆ ಯಾವುದಾದರೂ ಒಂದು ಮಂತ್ರಿಮಂಡಲ ಬಂದು ಇದನ್ನು ಬದಲಾಯಿಸುವುದು, ಇನ್ನೊಂದು ಮಂತ್ರಿಮಂಡಲ ಇನ್ನೊಂದು ರೀತಿ ವ್ಯವಸ್ಥೆ ಮಾಡುವುದು—ಹೀಗಾಗಬಾರದು. ಇದರಿಂದಲೇ ಅತಿ ತೀಕ್ಷ್ಣವಾದ ಟೀಕೆಗೆ ಸರ್ಕಾರ ಗುರಿಯಾಗುತ್ತಿರುವುದು ಎಂದು ನಾನು ಹೇಳುತ್ತೇನೆ. ಕೊನೆಯಪಕ್ಷ ಮೆಡಿಕಲ್ ಸ್ಕೂಲಿನಿಂದ ಪಾಸಾದ ಡಾಕ್ಟರುಗಳನ್ನು ಒದಗಿಸಿಕೊಡುತ್ತೇವೆಂದು ಹೇಳಬೇಕು. ಆ ರೀತಿ ಹೇಳತಕ್ಕಂಥ ಭರವಸೆಯನ್ನು ಈಡೇರಿಸುವುದಕ್ಕೆ ಜಾಗ್ರತೆ ಪ್ರಯತ್ನಮಾಡಬೇಕು. 3 ವರ್ಷಗಳ ಕೆಳಗೆ ಈ ಸರ್ಕಾರದವರು ಡಾಕ್ಟರುಗಳಿಗೆ 50 ರೂಪಾಯಿಗಳಷ್ಟು ರೂರಲ್ ಅಲೊಯನ್ಸ್ ಹೆಚ್ಚಿನ ರೀತಿಯಲ್ಲಿ ಕೊಡುತ್ತೇವೆಂದು ಈ ಸಭೆಯಲ್ಲಿ ಹೇಳಿದ್ದರು. 3 ವರ್ಷಗಳಾದರೂ ಇನ್ನೂ ಇದನ್ನು ಕಾರ್ಯರೂಪಕ್ಕೆ ತರಲಿಲ್ಲ. ಇವರಿಗೆ ಅಲೋಯನ್ಸ್ ಕೊಡಲು ದೇಶದಲ್ಲಿ ಹಣ ಇರಲಿಲ್ಲವೇ, ಮಂತ್ರಿಮಂಡಲವೇನಾದರೂ ಒಪ್ಪಲಿಲ್ಲವೇ, ಯಾವ ಕಾರಣದಿಂದ ಇದನ್ನು ಕೈಗೊಂಡಿಲ್ಲವೆಂಬುದಾಗಿ ನಾನು ಪ್ರಶ್ನೆ ಮಾಡುತ್ತೇನೆ. ಇವತ್ತು ಗ್ರಾಮಾಂತರ ಪ್ರದೇಶಗಳಿಗೆ ಡಾಕ್ಟರುಗಳು ಹೋಗುವುದಿಲ್ಲ. ಏಕೆಂದರೆ, ಅಲ್ಲಿ ಅವರಿಗೆ ಅಷ್ಟಾಗಿ ಸಾಕಷ್ಟು ಸ್ಥಾನಮಾನಗಳಿಲ್ಲ. ದೊಡ್ಡ ದೊಡ್ಡ ಹೋಟಲುಗಳಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸ್ವಲ್ಪ ಹಳ್ಳಿಗಾಡು ಪ್ರದೇಶಗಳಿಗೆ ಹೋಗಿ ಅಲ್ಲಿಯ ಜನರ ಸೇವೆ ಮಾಡತಕ್ಕ ಮನೋಭಾವ ಈ ಡಾಕ್ಟರುಗಳಲ್ಲಿ ಬರಬೇಕು. ಸಾಕಷ್ಟು ಔಷಧಿಗಳನ್ನು ಆಸ್ಪತ್ರೆಗಳಿಗೆ ಸರಬರಾಜು ಮಾಡಬೇಕು. ಯಾವ ಒಂದು ವಶೀಲಿಬಾಜಿಗೂ ಒಳಗಾಗಬಾರದು. ಇವರು ಪುಡಾರಿಗಳಿಗೂ ಒಳಗಾಗಬಾರದು. ಒಟ್ಟಿನಲ್ಲಿ ಈಗಿರತಕ್ಕ ಡಾಕ್ಟರುಗಳಿಗೆ ಚೆನ್ನಾಗಿ ಶಿಕ್ಷಣ ಕೊಟ್ಟು ಅವರನ್ನು ಗ್ರಾಮಾಂತರ ಪ್ರದೇಶಗಳಿಗೆ ಕಳುಹಿಸಿ ಕೊಟ್ಟರೆ ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯ ಅಲ್ಲಿನ ಜನತೆಗೆ ದೊರೆಯುವುದರಲ್ಲಿ ಏನೂ ಸಂದೇಹವಿಲ್ಲ. ಡಾಕ್ಟರುಗಳಿಗೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾದದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದರೆ ಈ ಖಾತೆ ಜನತೆ ಎಷ್ಟು ನಿರೀಕ್ಷೆ ಮಾಡಿತ್ತೋ ಅಷ್ಟು ಕೆಲಸವನ್ನು ಸಾಧಿಸದೇ ಇದ್ದರೂ ಇನ್ನುಳಿದ ಎರಡು ವರ್ಷಗಳ ಅವಧಿಯಲ್ಲಾದರೂ ಪೂರ್ತಿಯಾಗಿ ಕೈಗೊಂಡಿರತಕ್ಕ ಕೆಲಸಗಳನ್ನೆಲ್ಲಾ ಸಾಧನೆಮಾಡಿ ಈ ಖಾತೆಯಿಂದ ಜನತೆಗೆ ಕಲ್ಯಾಣವನ್ನುಂಟುಮಾಡುವುದಕ್ಕೆ ಈ ಸರ್ಕಾರದವರು ಎಲ್ಲ ಸಹಾಯಗಳನ್ನು ಕಲ್ಪಿಸಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಅಧ್ಯಕ್ಷರೇ, ಈ ದಿವಸ ಜನಾರೋಗ್ಯ ಮತ್ತು ವೈದ್ಯಕೀಯ ಸಂಬಂಧವಾದ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿರತಕ್ಕದ್ದನ್ನು ನಾನು ಅನುಮೋದಿಸುತ್ತಾ ಕೆಲವು ಮಾತುಗಳನ್ನಾಡಲು ಅಪೇಕ್ಷಿಸುತ್ತೇನೆ. ಮನುಷ್ಯನಿಗೆ ಆರೋಗ್ಯ ಭಾಗ್ಯ ಬಹಳ ಪ್ರಾಧಾನ್ಯವಾದುದು. ಸರ್ಕಾರದವರು ದೇಶದ ಜನತೆಯ ಆರೋಗ್ಯಕ್ಕಾಗಿ ಏರ್ಪಾಟು ಮಾಡತಕ್ಕ ಪ್ರತಿಯೊಂದು ಕಾನೂ ಸಹ ತೊಂದರೆಯಲ್ಲಿರತಕ್ಕ, ಕಷ್ಟದಲ್ಲಿರತಕ್ಕ, ಮಾನವನ ಸೇವೆಗಾಗಿ ಅನುಕೂಲವಾಗಬೇಕಾದುದು ಬಹಳ ಮುಖ್ಯಾಂಶವೆಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರದವರು ಮೆಡಿಕಲ್ ಕಾಲೇಜುಗಳನ್ನು ಈಗ ಪ್ರಾರಂಭ ಮಾಡಿ ಆಸ್ಪತ್ರೆಗಳನ್ನು ಕಟ್ಟಿಸಿ ದೇಶದ ಜನತೆಗೆ ಅನುಕೂಲವಾಗಬೇಕು ಎಂಬ ಒಂದು ದೊಡ್ಡ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಆದರೆ ಪ್ರತಿ ವರ್ಷವೂ ಮೆಡಿಕಲ್ ಕಾಲೇಜುಗಳಿಂದ ಎಷ್ಟೋ ಡಾಕ್ಟರುಗಳು ಬಂದರೂ ಸಹ ಇನ್ನೂ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯವಿಲ್ಲವೆ ಬ ಕೂಗು ಇದ್ದೇ ಇದೆ. ಈ ಸಮಸ್ಯೆ ಯಾವಾಗ ಸರಿಹೋಗುತ್ತದೆಂಬುದು ನನಗಂತೂ ಅರ್ಥವಾಗುತ್ತಿಲ್ಲ. ಈ ದೇಶದಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಪ್ರಜಾಪ್ರತಿನಿಧಿ ಸಭೆಯ ಸದಸ್ಯ ಯಾವಾಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯಕ್ಕೆ ಬಹಳ ತೊಂದರೆಯಿದೆ ಎಂಬುದಾಗಿ ಹೇಳುತ್ತಿದ್ದೆ. ಆದರೆ ಈಗ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕೂಡ ಎಷ್ಟೋ ಮೆಡಿಕಲ್ ಕಾಲೇಜುಗಳು ಪ್ರಾರಂಭವಾದರೂ ಸಹ ದೇಶದಲ್ಲಿ ಡಾಕ್ಟರುಗಳ ಸಂಖ್ಯೆ ಕಮ್ಮಿಯಾಗಿದೆ. ಗ್ರಾಮಾಂತರ ಪ್ರದೇಶಗಳಿಗೆ ವೈದ್ಯಕೀಯ ಸಹಾಯ ಸೌಲಭ್ಯಗಳು ದೊರಕುತ್ತಾ ಇಲ್ಲ. ಮಲೆನಾಡು ಜಿಲ್ಲೆಗಳಲ್ಲಿ ಆಸ್ಪತ್ರೆಗಳನ್ನು ಕಟ್ಟಬೇಕೆಂದು ಮಾಡಿದ ಒಂದು ಯೋಜನೆಯಲ್ಲಿ 15 ರಿಂದ 20 ಸಾವಿರ ಜನಸಂಖ್ಯೆ ಇರುವ ಒಂದೊಂದು ಊರಿಗೆ ಒಂದೊಂದು ಆಸ್ಪತ್ರೆಯನ್ನು ಕೊಟ್ಟು ಉಪಕಾರ ಮಾಡಿದ್ದಾರೆ. ಆದರೆ ಮಲೆನಾಡು ಆಸ್ಪತ್ರೆಗಳನ್ನು ನೋಡಿದರೆ ಸುಮಾರು

(ಶ್ರೀಮತಿ ಬಿ. ಎರ್. ಸುಬ್ಬಮ್ಮ)

10 ಆಸ್ಪತ್ರೆಗಳಿಗೆ ಒಂದು ಆಸ್ಪತ್ರೆಯಲ್ಲಿಯೂ ಕೂಡ ಡಾಕ್ಟರುಗಳಿಲ್ಲ. ಕಾಂಪೌಂಡರುಗಳು ಮಾತ್ರ ಔಷಧಿ ಕೊಡುತ್ತಿದಾರೆ ಕೆಲವು ಪ್ರದೇಶಗಳಲ್ಲಿ ಔಷಧಿ ಕೊಡುವ ಜನರೂ ಸಹ ಇರುವುದಿಲ್ಲ. ಏಕೆ ಈ ರೀತಿಯಾಗುತ್ತಿದೆಯೆಂದರೆ, ಮಲೆನಾಡಿನಲ್ಲಿ ಹೋಗಿ ಡಾಕ್ಟರುಗಳು ವಾಸಮಾಡುವುದಕ್ಕೆ ಸ್ವಲ್ಪ ಅಂಜಿಕೊಳ್ಳುತ್ತಾರೆ. ಅವರ ಆಕರ್ಷಣೆಗೆ ತಕ್ಕ ಹಾಗೆ ಹಿಂದೆ ಹೆಚ್ಚಿನ ಭತ್ಯವನ್ನು ಕೊಟ್ಟಾಗ್ಯೂ ಕೆಲವರು ಹೋಗುತ್ತಿರಲಿಲ್ಲ. ಮಲೆನಾಡು ಅಲೋಯನ್ಸ್ ಎಂದು ಕೊಡುತ್ತಿದ್ದರು. ಈ ರೀತಿ ಹೆಚ್ಚಿನ ಸೌಲಭ್ಯಗಳನ್ನು ಕೊಡುತ್ತಿದ್ದರು. ಈಗ ಅದನ್ನು ಕೊಡುತ್ತಾ ಇಲ್ಲ, ಆದ್ದರಿಂದ ಗ್ರಾಮಾಂತರ ಪ್ರದೇಶಗಳಿಗೆ ಹೋಗತಕ್ಕ ಡಾಕ್ಟರುಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದು ಬಹಳ ಅವಶ್ಯಕ ಇಲ್ಲದೇ ಹೋದರೆ ಜಿಲ್ಲಾ ಹೆಡ್ ಕ್ವಾರ್ಟರುಗಳಿಗೆ ಅವರನ್ನು ಹಾಕಿದರೂ ಹೋಗುವುದಿಲ್ಲ. ಅಲ್ಲಿಗೆ ಹೋಗಲೂ ಸಹ ಅವರು ಒಪ್ಪುವುದಿಲ್ಲ. ಕೇವಲ ಬೆಂಗಳೂರು, ಮೈಸೂರು ಭಾಗಗಳನ್ನು ಮಾತ್ರ ಆರಿಸಿಕೊಳ್ಳುತ್ತಾರೆ. ಇದೂ ಒಂದು ಕಾರಣವೆಂದು ನಾನು ಭಾವಿಸಿಕೊಂಡಿದ್ದೇನೆ. ವೈದ್ಯಕೀಯ ಮತ್ತು ಜನಾರೋಗ್ಯ—ಈ ಎರಡು ಇಲಾಖೆಗಳು ಈಗ ಪ್ರತ್ಯೇಕವಾಗಿರುವುದರಿಂದ ಕೆಲವರು ಒಂದೊಂದು ಇಲಾಖೆಗೆ ಹೋಗಬೇಕೆಂಬ ಪೈಪೋಟಿ ಇರುವುದರಿಂದ ಮಲೆನಾಡು ವೈದ್ಯಕೀಯ ಇಲಾಖೆಯಿಂದ ಜನಾರೋಗ್ಯ ಇಲಾಖೆಗೆ ಹೋಗುವುದಕ್ಕೆ ತೊಂದರೆಪಡುತ್ತಿದ್ದಾರೆ.

ಇದನ್ನು ಸರ್ಕಾರದವರು ವಿಮರ್ಶೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಿಗೆ ಡಾಕ್ಟರುಗಳನ್ನು ಕಳುಹಿಸುವುದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಇಲ್ಲದೇ ಹೋದರೆ ಸರ್ಕಾರದವರು ಆಸ್ಪತ್ರೆಗಳಿಗೆ ಔಷಧಿಯನ್ನು ಒದಗಿಸಿದರೂ ಕೂಡ ಏನೂ ಪ್ರಯೋಜನವಿಲ್ಲದಂತಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಲೆನಾಡು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಆಸ್ಪತ್ರೆಗಳ ಪರಿಸ್ಥಿತಿ ಹೀಗಾದರೆ ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕ ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ ಎಂಬುದನ್ನು ತಿಳಿಸುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಚಿಕ್ಕಮಗಳೂರಿನಲ್ಲಿ ಸುಮಾರು 100 ವರ್ಷಗಳಿಂದ ಒಂದು ಮೆಟರ್ನಿಟಿ ಆಸ್ಪತ್ರೆ ಇದೆ. ಅದು ತಾನೇತಾನಾದ ಒಂದು ಸ್ವತಂತ್ರವಾದ ಆಸ್ಪತ್ರೆಯಾಗಿತ್ತು. ಆ ಆಸ್ಪತ್ರೆಯನ್ನು ಈಗ್ಗೆ ಎರಡು ವರ್ಷಗಳ ಹಿಂದೆ ಬೇರ್ಪಡಿಸಿ ಆ ಆಸ್ಪತ್ರೆಗೂ ಡಿಸ್ಟ್ರಿಕ್ಟ್ ಆಸ್ಪತ್ರೆಗೂ ಸಂಬಂಧವನ್ನು ಕಲ್ಪಿಸಿದ್ದಾರೆ. ಅಲ್ಲಿ ಬೇರೆ ಯಾವ ಮಿಷನ್ ಆಸ್ಪತ್ರೆಯೂ ಇಲ್ಲ. ಅಲ್ಲಿ ಮೊದಲು ಒಬ್ಬರು ಲೇಡಿ ಡಾಕ್ಟರು ಮಾತ್ರ ಇದ್ದರು. ಅದಕ್ಕೋಸ್ಕರ ಅಲ್ಲಿಗೆ ಒಬ್ಬರು ಸರ್ಜನ್ ಕೊಡಬೇಕೆಂದು ನಾವು ಕೇಳಿದ್ದೆವು. ಅಲ್ಲಿ ಬೇರೆ ಯಾವ ಆಸ್ಪತ್ರೆಗಳೂ ಇಲ್ಲದೆ ಇದ್ದುದರಿಂದ, ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಮಹಿಳೆಯರಿಗೆ ಹೆರಿಗೆಯ ಸೌಲಭ್ಯ ಇಲ್ಲ ಎಂದು ಹೇಳಿ ಆ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಿದರು. ಆ ಆಸ್ಪತ್ರೆಯಲ್ಲಿದ್ದ ಡಾಕ್ಟರ ಪೋಸ್ಟನ್ನು ಮಾತ್ರ ಅಪ್‌ಗ್ರೇಡ್ ಮಾಡಿದರೇ ಹೊರತು ಆ ಆಸ್ಪತ್ರೆಗೆ ಬೇಕಾದಂತಹ ಅನುಕೂಲತೆ ಇತ್ಯಾದಿಗಳನ್ನು ಒದಗಿಸುವ ಏರ್ಪಾಡು ಮಾಡಲಿಲ್ಲ. ಅಲ್ಲಿ ಡಾಕ್ಟರ ಪೋಸ್ಟ್ ಇದ್ದುದನ್ನ ಸರ್ಜನ್ ಪೋಸ್ಟ್ ಮಾಡಿದ್ದಾರೆ. ಈಗ ಆ ಆಸ್ಪತ್ರೆಯಲ್ಲಿರತಕ್ಕ ಲೇಡಿ ಸರ್ಜನ್ ಅವರ ಕಷ್ಟ ಹೇಳತೀರದು. ಪ್ರತಿಯೊಂದನ್ನೂ (ಗ್ಲೂಕೋಸ್ ಇಂಜಕ್ಷನ್ ಅನ್ನು ಕೂಡ) ಜನರಲ್ ಆಸ್ಪತ್ರೆಯಿಂದ ತರಿಸಿಕೊಂಡು ಕೆಲಸ ಮಾಡಬೇಕಾಗಿದೆ. ಅನೇಕ ಸಾರಿ ಆ ಆಸ್ಪತ್ರೆಯ ಪರಿಸ್ಥಿತಿಯನ್ನ ಸುಧಾರಿಸಬೇಕು, ಅದಕ್ಕೆ ಬೇಕಾದ ಸೌಲಭ್ಯವನ್ನ ಒದಗಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಒಂದು ವರ್ಷವಾದ ಮೇಲೆ ಅದರ ಪರಿಸ್ಥಿತಿ ಸುಧಾರಿಸಬಹುದೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಅದು ಇನ್ನೂ ಹಾಗೆಯೇ ಇದೆ. ಇನ್ನೂ 5 ವರ್ಷಗಳಾದರೂ ಅದರ ಪರಿಸ್ಥಿತಿಯು ಉತ್ತಮವಾಗುತ್ತದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಆ ಆಸ್ಪತ್ರೆಯ ಬೋರ್ಡ್ ಆಫ್ ವಿಜಿಟರ್ಸ್‌ಗಳು ರಾಜೀನಾಮೆಯನ್ನು ಕೊಟ್ಟರು. ಆದರೂ ಸಹ ಆ ಆಸ್ಪತ್ರೆಯ ಪರಿಸ್ಥಿತಿ ಸರ್ಕಾರಕ್ಕೆ ಗೊತ್ತಾಗಲಿಲ್ಲ. ಇದರ ಪರಿಸ್ಥಿತಿ ಏನೆಂಬುದನ್ನು ಜಾಗ್ರತೆಯಾಗಿ ಸರ್ಕಾರದವರು ವಿಮರ್ಶೆ ಮಾಡಬೇಕು. ಅಲ್ಲಿನ ಜನರು, ಮಲೆನಾಡಿನವರಾದ ನಮ್ಮ ವಿಷಯದಲ್ಲಿ ಸರ್ಕಾರದವರು ನಿಕೃಷ್ಟ ಮನೋಭಾವನೆಯನ್ನು ಹೊಂದಿದ್ದಾರೋ ಏನೋ ಎನ್ನುವ ಒಂದು ಮನಸ್ಸನ್ನ ಅವರ ಹೊಂದಿದ್ದಾರೆ. ಆದರಿಂದ ಆ ವಿಷಯದಲ್ಲಿ ಸರ್ಕಾರದವರು ಅದಷ್ಟು ಜಾಗ್ರತೆ ನಿಗಾ ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಮಲೆನಾಡಿನಲ್ಲಿರ ಕ್ಕ ಕೂಡುವಳ್ಳಿಯಲ್ಲಿ ಒಂದು ಹೆಲ್ತ್ ಯೂನಿಟ್ ಇತ್ತು. ಸುಮಾರು 15 ವರ್ಷಗಳಿಂದಲೂ ಅದು ಅಲ್ಲಿ ಇತ್ತು. ಆ ಗ್ರಾಮಸ್ಥರು ಆ ಹೆಲ್ತ್ ಯೂನಿಟ್ಟಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಕೊಟ್ಟು ಅದನ್ನ ನಡೆಸಿಕೊಂಡು ಬರುತ್ತಿದ್ದರು. ಆ ಆಸ್ಪತ್ರೆಯನ್ನು ಸರ್ಕಾರದವರು ವಸ್ತಾರೆ ಗ್ರಾಮಕ್ಕೆ ಬದಲಾಯಿಸಿದರು. ಆ ಮೇಲೆ ಆ ಆಸ್ಪತ್ರೆಯಲ್ಲಿದ್ದ ಸಾಮಾನುಗಳು ಕೂಡ ಕಳುವು ಆಯಿತು. ಈಗ ಆ ಆಸ್ಪತ್ರೆಗೆ ಡಾಕ್ಟರನ್ನು ಕೊಟ್ಟಿಲ್ಲ. ಅಲ್ಲಿಗೆ

ಬರತಕ್ಕ ರೋಗಿಗಳು ಬಹಳ ಕಡಿಮೆ. ಒಂದು ದಿನಸಕ್ಕೆ ಅಲ್ಲಿಗೆ ಇಪ್ಪತ್ತು ರೋಗಿಗಳು ಕೂಡ ಬರುವುದಿಲ್ಲ. ಮೊದಲು ಇದು ಕೊಡುವಳ್ಳಿಯಲ್ಲಿ ಇದ್ದಾಗ ಜನಗಳಿಗೆ ಬೇಕಾದ ವೈದ್ಯಕೀಯ ಸೌಲಭ್ಯವನ್ನು ಒದಗಿಸಿ ಕೊಟ್ಟು ಬಹಳ ಚೆನ್ನಾಗಿ ನಡೆಯುತ್ತಾ ಇತ್ತು. ಅಂಥಾ ಒಂದು ಆಸ್ಪತ್ರೆಯನ್ನ ಅಥವಾ ಹೆಲ್ತ್ ಯೂನಿಟ್ ಅನ್ನು ಆ ಊರಿನಿಂದ ಇನ್ನೊಂದು ಊರಿಗೆ ಬದಲಾಯಿಸಿದುದರಿಂದ ಜನಗಳಿಗೆ ಅನುಕೂಲವಾಗುವುದರ ಬದಲು ಅನನುಕೂಲವಾಯಿತು. ಈ ಬಗ್ಗೆ ಸರ್ಕಾರದವರು ವರದಿ ತರಿಸಿ ಪುನಃ ಪರಿಶೀಲಿಸಬೇಕು.

ಇನ್ನು ಎಲ್.ಎಂ.ಪಿ. ಓದಿರತಕ್ಕ ವಿದ್ಯಾರ್ಥಿಗಳಿಗೆ ಕಂಡೆನ್ಸ್ಡ್ ಎಂ.ಬಿ.ಬಿ.ಎಸ್. ಕೋರ್ಸ್ ಎಂದು ಮಾಡಿದ್ದರು. ಅದನ್ನು ಓದಿ ಪಾಸು ಮಾಡಿಕೊಂಡು ಈಗ ಕೆಲಸದಲ್ಲಿರತಕ್ಕವರಿಗೆ ಎಂ.ಬಿ.ಬಿ.ಎಸ್. ಪರೀಕ್ಷೆಯನ್ನ ಪಾಸು ಮಾಡಿಕೊಂಡಿರುವವರಿಗೆ ಏನು ಪೇ ಸ್ಕೇಲನ್ನು ಕೊಟ್ಟಿದ್ದಾರೆಯೋ ಆ ಪೇ ಸ್ಕೇಲನ್ನು ಅವರಿಗೆ ಕೊಟ್ಟಿಲ್ಲ. ಇದರಿಂದ ಅವರಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಈ ವಿಷಯವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು.

